# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಬುಧವಾರ, ಅಕ್ಟೋಬರ್ 09, 2024

ಸಂಪುಟ : 51 ಸಂಚಿಕೆ : 147 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com







## ಗ್ಯಾರಂಟಿ : ಫಲಾನುಭವಿಗಳ ಬ್ಯಾಂಕ್ ಕೆವೈಸಿ ಅಪ್‌ಡೇಟ್ ಮಾಡಿ



**ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಮನೂರು ಟಿ. ಬಸವರಾಜ್ ಸೂಚನೆ**

ದಾವಣಗೆರೆ, ಅ. 8 - ಗ್ಯಾರಂಟಿ ಯೋಜನೆ ಫಲಾನುಭವಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಬ್ಯಾಂಕ್ ಕೆವೈಸಿ, ಬಯೋಮೆಟ್ರಿಕ್ ಮೂಲಕ ಅವರ ಖಾತೆಗೆ ಹಣ ಜಮೆಯಾಗುವಂತೆ ಕ್ರಮ ವಹಿಸಲಾಗುವುದೆಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಮನೂರು ಟಿ. ಬಸವರಾಜ್ ತಿಳಿಸಿದರು.

ಇಲ್ಲಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂದು ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ತಹಶೀಲ್ದಾರರು ಹಾಗೂ ಉಪವಿಭಾಗಾಧಿಕಾರಿಗಳು ಜಂಟಿಯಾಗಿ ಎಲ್ಲಾ ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿ ಪಡಿತರ ವಿತರಣೆ, ಪಡಿತರ ಧಾನ್ಯಗಳ ವಿತರಣೆಯಲ್ಲಿ ಆಗುವ ತೂಕದ ವ್ಯತ್ಯಾಸ, ಆಹಾರ ಧಾನ್ಯಗಳ ಗುಣಮಟ್ಟ ಪರಿಶೀಲನೆ ಮಾಡುವಂತೆ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಬಿ. ಸುರೇಶ್ ಇಟ್ನಾಳ್ ಮಾತನಾಡಿ, ಸರ್ಕಾರದ ಐದು ಗ್ಯಾರಂಟಿ (4ನೇ ಪುಟಕ್ಕೆ)

## ಉಪಸಮಿತಿ, ಇಲ್ಲವೇ ಸದನಕ್ಕೆ ಜಾತಿ ಗಣತಿ



ಬೆಂಗಳೂರು, ಅ. 8- ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸಮೀಕ್ಷಾ ವರದಿಯನ್ನು ಸಂಪುಟದ ಉಪಸಮಿತಿಗೆ ವಹಿಸಲಾಗುವುದು ಇಲ್ಲವೇ ವಿಧಾನಸಭೆಯಲ್ಲಿ ಮಂಡಿಸಲಾಗುವುದು. ಈ ಬಗ್ಗೆ ಮುಂದಿನ ಸಂಪುಟ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳ ಲಾಗುವುದು ಎಂದು ಗೃಹ ಸಚಿವ ಜಿ ಪರಮೇಶ್ವರ್ ತಿಳಿಸಿದ್ದಾರೆ. ಅಕ್ಟೋಬರ್ 18ರಂದು ನಡೆಯಲಿರುವ ಸಂಪುಟ ಸಭೆಯ ಎದುರು ಸಮೀಕ್ಷಾ ವರದಿ ಮಂಡಿಸ ಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾ ಮಯ್ಯ ತಿಳಿಸಿದ್ದರು. ಈ ಸಮೀಕ್ಷಾ ವರದಿ ಜಾತಿಗಣತಿ ಎಂದೇ ಹೆಸರಾಗಿದೆ. ಪತ್ರಕರ್ತ (4ನೇ ಪುಟಕ್ಕೆ)

## ಸಮೀಕ್ಷೆ ಹೆಸರಿನ ಜಾತಿ ಗಣತಿ ವರದಿ ಅನುಷ್ಠಾನ ಬೇಡ

**ಸರ್ಕಾರಕ್ಕೆ ಒಕ್ಕಲಿಗರ ಸಂಘದ ಆಗ್ರಹ**

ಬೆಂಗಳೂರು, ಅ. 8 - ರಾಜ್ಯ ಸರ್ಕಾರ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಹೆಸರಲ್ಲಿ ನಡೆಸಿರುವ ಜಾತಿಗಣತಿ ವರದಿ ಅನುಷ್ಠಾನ ಮಾಡಬಾರದು ಎಂದು ಒಕ್ಕಲಿಗರ ಸಂಘ ಒತ್ತಾಯಿಸಿದೆ.

ಎಲ್ಲಾ ಸಮುದಾಯಗಳಿಗೆ ಅನುಕೂಲವಾಗುವಂತೆ ಎಲ್ಲಾ ಜನವಸತಿಗಳಿಗೆ ಮತ್ತೆ ಭೇಟಿ ನೀಡಿ ವೈಜ್ಞಾನಿಕವಾಗಿ ಮರು ಸಮೀಕ್ಷೆ ನಡೆಸಬೇಕು.

ಪ್ರತಿ ಮನೆಗೆ ಭೇಟಿ ನೀಡಿ ಅಗತ್ಯ ಮಾಹಿತಿ ಸಂಗ್ರಹಿಸಿ ಕಾಲಮಿತಿಯಲ್ಲಿ ವರದಿ ಪಡೆಯಬೇಕು ಹಾಗೂ ಸಾರ್ವಜನಿಕವಾಗಿ ಮುಕ್ತ ಚರ್ಚೆಗೆ ಅವಕಾಶ ನೀಡಿದ ನಂತರವಷ್ಟೇ ಅನುಷ್ಠಾನಕ್ಕೆ ತರಬೇಕು ಎಂದು ಸಂಘ ಆಗ್ರಹಿಸಿದೆ.

ಜಾತಿಗಣತಿ ವರದಿ ಅನುಷ್ಠಾನಕ್ಕೆ ಯಾವುದೇ ಆಕ್ಷೇಪ ಇಲ್ಲ. ಆದರೆ, ಎಲ್ಲಾ ಜನಾಂಗಕ್ಕೂ ಅನುಕೂಲವಾಗುವಂತೆ ವೈಜ್ಞಾನಿಕ ರೀತಿಯಲ್ಲಿ ಮರು ಸಮೀಕ್ಷೆ ನಡೆಸಬೇಕು ಎಂದು (3ನೇ ಪುಟಕ್ಕೆ)

## ಪಾಕ್‌ನ 22 ಜನ ಭಾರತದಲ್ಲಿ ನೆಲೆಸಲು ನೆರವಾದವನ ಬಂಧನ

ಬೆಂಗಳೂರು, ಅ. 9 - ಪಾಕಿಸ್ತಾನದ 22 ನಾಗರಿಕರು ಬೆಂಗಳೂರು ಸೇರಿದಂತೆ ಕರ್ನಾಟಕದ ಹಲವು ಭಾಗಗಳಲ್ಲಿ ನೆಲೆಸಲು ನೆರವು ನೀಡಿದ ಆರೋಪದ ಮೇಲೆ ಪರ್ವೇಜ್ ಎಂಬ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಪಾಕಿಸ್ತಾನದ ನಾಗರಿಕರು ಹಿಂದೂಗಳ ಹೆಸರಿನಲ್ಲಿ ಭಾರತದಲ್ಲಿ ನೆಲೆಸಲು ಈತ ನೆರವಾಗಿದ್ದ. ಈ ರೀತಿಯ ನಾಲ್ವರನ್ನು ಬೆಂಗಳೂರು ಹೊರವಲಯದ ಜಿಗಣಿಯಲ್ಲಿ ಬಂಧಿಸಲಾಗಿತ್ತು. (4ನೇ ಪುಟಕ್ಕೆ)

## ಹರಿಯಾಣದಲ್ಲಿ ಬಿಜೆಪಿ ಹ್ಯಾಟ್ರಿಕ್ ಜಮ್ಮು-ಕಾಶ್ಮೀರದಲ್ಲಿ ಮೈತ್ರಿಗೆ ಜಯ

| ಹರಿಯಾಣ | |
|---|---|
| ಬಿಜೆಪಿ | 48 |
| ಕಾಂಗ್ರೆಸ್ | 37 |
| ಐ.ಎನ್.ಎಲ್.ಡಿ. | 2 |
| ಇತರರು | 3 |

| ಜಮ್ಮು-ಕಾಶ್ಮೀರ | |
|---|---|
| ನ್ಯಾ.ಕಾನ್ಫರೆನ್ಸ್ | 42 |
| ಬಿಜೆಪಿ | 29 |
| ಕಾಂಗ್ರೆಸ್ | 6 |
| ಪಿ.ಡಿ.ಪಿ. | 3 |
| ಜೆ.ಪಿ.ಸಿ. | 1 |
| ಇತರರು | 7 |

ನವದೆಹಲಿ, ಅ. 8 - ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲುವಿನ ಹ್ಯಾಟ್ರಿಕ್ ಸಾಧಿಸಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ನೇತೃತ್ವದ ಮೈತ್ರಿಕೂಟ ಜಯ ಗಳಿಸಿದೆ. 370ನೇ ವಿಧಿ 2019 ರಲ್ಲಿ ರದ್ದುಗೊಳಿಸಿದ ನಂತರ ನಡೆದ ಮೊದಲ ಚುನಾವಣೆ ಇದಾಗಿತ್ತು.

ಕೇವಲ ಆರು ತಿಂಗಳ ಹಿಂದಷ್ಟೇ ಹರಿಯಾಣದ ಮುಖ್ಯಮಂತ್ರಿ ಆಗಿದ್ದ ನಯಾಬ್ ಸಿಂಗ್ ಸೈನಿ ಅವರು, ಆಡಳಿತ ವಿರೋಧಿ ಅಲೆಯನ್ನು ಹಿಮ್ಮೆಟ್ಟಿಸಿ ಬಿಜೆಪಿಗೆ ಸರಳ ಬಹುಮತ ದೊರಕಿಸಿ ಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

90 ಸದಸ್ಯರ ಹರಿಯಾಣ ವಿಧಾನಸಭೆಯಲ್ಲಿ ಬಿಜೆಪಿ 48 ಸ್ಥಾನ ಗಳಿಸಿದೆ. ಕಾಂಗ್ರೆಸ್ 37 ಸ್ಥಾನ ಪಡೆದಿದೆ. ಐ.ಎನ್.ಎಲ್.ಡಿ. ಪಕ್ಷ ಎರಡು ಹಾಗೂ ಇತರರು ಮೂರು ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

2019ರಲ್ಲಿ ರಾಜ್ಯದಲ್ಲಿ ಬಿಜೆಪಿ 41 ಸ್ಥಾನ ಪಡೆದಿತ್ತು. ಈ ಬಾರಿ 48 ಸ್ಥಾನ ಗಳಿಸಿದೆ. ಕೆಲವೇ ತಿಂಗಳ ಹಿಂದೆ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಹಿನ್ನಡೆ ಕಂಡಿತ್ತು. ಚುನಾವಣೋತ್ತರ ಸಮೀಕ್ಷೆಯಲ್ಲಿ ಬಿಜೆಪಿಗೆ ಹಿನ್ನಡೆಯಾಗಲಿದೆ ಎಂದು ಹೇಳಲಾಗಿತ್ತು. ಆದರೆ ಬಿಜೆಪಿ ಎಲ್ಲಾ ನಿರೀಕ್ಷೆಗಳನ್ನು ಮೀರಿ ಸ್ವಂತ ಬಲದ ಮೇಲೆ ಬಹುಮತ ಪಡೆದುಕೊಂಡಿದೆ.

ಇಷ್ಟಾದರೂ ರಾಜ್ಯದ ಹತ್ತು ಸಚಿವರ ಪೈಕಿ ಎಂಟು ಸಚಿವರು ಸೋಲು ಕಂಡಿದ್ದಾರೆ. ವಿಧಾನಸಭಾಧ್ಯಕ್ಷ ಗ್ಯಾನ್ ಚಂದ್ ಗುಪ್ತ ಸಹ ಸೋಲುಂಡಿದ್ದಾರೆ.

ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಎರಡು ಮತ ಗಳಿಕೆ ಪಾಲು ಹೆಚ್ಚಿಸಿಕೊಂಡಿವೆ. ಬಿಜೆಪಿ ಕಳೆದ ಬಾರಿಗೆ ಹೋಲಿಸಿದರೆ ಶೇಕಡ 3 ರಷ್ಟು ಹೆಚ್ಚು ಮತ ಪಡೆದಿದೆ. ಪಕ್ಷ ಶೇಕಡ 39.94 ಮತ ಪಡೆಯುವಲ್ಲಿ ಯಶಸ್ವಿಯಾಗಿದೆ.

ಕಾಂಗ್ರೆಸ್ ಕಳೆದ ಬಾರಿಗಿಂತ ಶೇಕಡಾ 11ರಷ್ಟು ಮತ ಹೆಚ್ಚಿಸಿಕೊಂಡಿದ್ದು, ಶೇಕಡ 39.04 ಮತ ಪಡೆದುಕೊಂಡಿದೆ. ಆದರೆ 10 ವರ್ಷಗಳ ನಂತರ ರಾಜ್ಯದಲ್ಲಿ ಅಧಿಕಾರಕ್ಕೆ ಮರಳುವ ಕನಸು ಭಗ್ನವಾಗಿದೆ.

ಕಳೆದ ಚುನಾವಣೆಯಲ್ಲಿ ಕಿಂಗ್ ಮೇಕರ್ ಆಗಿದ್ದ ಜನನಾಯಕ ಜನತಾ ಪಾರ್ಟಿ ಈ ಬಾರಿ ತೀವ್ರ ಮುಖಭಂಗ ಕಂಡಿದೆ. ಪಕ್ಷ ಯಾವುದೇ ಸ್ಥಾನ ಪಡೆಯಲು ಸಾಧ್ಯವಾಗಿಲ್ಲ. ಐ.ಎನ್.ಎಲ್.ಡಿ. ಕೇವಲ 2 ಸ್ಥಾನಗಳಿಗೆ ಸೀಮಿತವಾಗಿದೆ. ಆಮ್ ಆದ್ಮಿ ಪಾರ್ಟಿ ಸಹ ಗೆಲುವು ಕಾಣಲು ಸಾಧ್ಯವಾಗಿಲ್ಲ.

90 ಸದಸ್ಯರನ್ನು ಹೊಂದಿರುವ ಜಮ್ಮು ಮತ್ತು ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ 42 ಸ್ಥಾನಗಳಲ್ಲಿ ಗೆಲುವು ದಾಖಲಿಸಿದೆ. ಅದರ ಮೈತ್ರಿ ಪಕ್ಷವಾದ ಕಾಂಗ್ರೆಸ್ ಆರು (4ನೇ ಪುಟಕ್ಕೆ)




# ಪರ್ಯಾಯ ನಾಯಕತ್ವ : ಸಿದ್ದರಾಮಯ್ಯ ಬಣದಲ್ಲೇ ಒಡಕು

**ಕಾಂಗ್ರೆಸ್ ವರಿಷ್ಠರ ಮೌನ, ತೆರೆಮರೆಯಲ್ಲೇ ನಾಯಕತ್ವಕ್ಕೆ ಅನ್ವೇಷಣೆ**

ಬೆಂಗಳೂರು, ಅ. 8 - ಪರ್ಯಾಯ ನಾಯಕತ್ವಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಣದಲ್ಲೇ ಬಿರುಕು ಮೂಡಿದೆ.

ಮುಡಾ ಬಿಡಿ ನಿವೇಶನ ಹಾಗೂ ಪ್ರಾಧಿಕಾರದ ಹಣವನ್ನು ಎರಡು ಕ್ಷೇತ್ರಗಳ ಅಭಿವೃದ್ಧಿಗೆ ಬಳಸಿದ ವಿಚಾರಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ.) ಯಾವುದೇ ಕ್ಷಣದಲ್ಲಿ ಮುಖ್ಯಮಂತ್ರಿ ಅವರಿಗೆ ನೋಟಿಸ್ ಜಾರಿ ಮಾಡಿ ಕಾನೂನು ಕ್ರಮಕ್ಕೆ ಮುಂದಾಗಬಹುದು.

ನ್ಯಾಯಾಲಯಗಳು ಕರ್ನಾಟಕದ ಮುಖ್ಯಮಂತ್ರಿ ವಿರುದ್ಧ ತನಿಖೆಗೆ ಆದೇಶ ನೀಡಿದ ನಂತರ ಕಾಂಗ್ರೆಸ್ ವರಿಷ್ಠರು ಮೌನ ವಹಿಸಿರುವುದಲ್ಲದೆ, ತೆರೆಮರೆಯಲ್ಲೇ ಪರ್ಯಾಯ ನಾಯಕತ್ವಕ್ಕೆ ಅನ್ವೇಷಣೆ ನಡೆಸಿದ್ದಾರೆ.

ಇದರ ಸುಳಿವರಿತ ಸಿದ್ದರಾಮಯ್ಯ ತಾವು ಅಧಿಕಾರ ತ್ಯಜಿಸಿದರೆ, ತಮ್ಮ ಬೆಂಬಲಿಗರೇ ನಾಯಕತ್ವ ವಹಿಸಿಕೊಳ್ಳಬೇಕೆಂಬ ತೀರ್ಮಾನಕ್ಕೆ ಬಂದಿದ್ದಾರೆ.

ಇದರ ಹಿನ್ನೆಲೆಯಲ್ಲೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ತಮ್ಮ ಬೆಂಬಲಿಗರ ಮೂಲಕ ಕರ್ನಾಟಕ ರಾಜಕೀಯಕ್ಕೆ ಹಿಂತಿರುಗಿ ಮುಖ್ಯಮಂತ್ರಿ ಆಗಿ ಎಂಬ ಸಂದೇಶ ನೀಡಿದ್ದರು.

ಅವರು ರಾಜ್ಯ ರಾಜಕಾರಣಕ್ಕೆ ಬರುವುದಿಲ್ಲ ಎನ್ನುವುದು ತಿಳಿದ ವಿಚಾರವೇ. ಆದರೂ, ಎಐಸಿಸಿ ವಿಶ್ವಾಸ ಪಡೆದುಕೊಳ್ಳಲು ಸಿದ್ದರಾಮಯ್ಯ ಈ ತೀರ್ಮಾನ ಕೈಗೊಂಡಿದ್ದರು. ಖರ್ಗೆ ಅವರು ರಾಜ್ಯ ರಾಜಕಾರಣಕ್ಕೆ ಬರಲು ನಿರಾಕರಿಸಿದ ಬೆನ್ನಲ್ಲೇ ಸಿದ್ದರಾಮಯ್ಯ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಹಸಿರು ನಿಶಾನೆ ತೋರಿದ್ದಾರೆ ಎನ್ನಲಾಗಿತ್ತು.

ಜಾರಕಿಹೊಳಿಯವರನ್ನು ಬೆಂಬಲಿಸಿದ್ದು ಅದೇ ಬಣಕ್ಕೆ ಸೇರಿದ ಸಚಿವರಾದ ಡಾ.ಜಿ.ಪರಮೇಶ್ವರ್ ಹಾಗೂ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಇರಿಸು-ಮುರಿಸು ತಂದಿದೆ. ವಿಷಯ ತಿಳಿಯುತ್ತಿದ್ದಂತೆ ಡಾ. ಪರಮೇಶ್ವರ್ ಹಾಗೂ ಡಾ.ಮಹದೇವಪ್ಪ ಈ ಎಲ್ಲಾ ಬೆಳವಣಿಗೆಗಳಿಂದ ದೂರ ಉಳಿದು ತಮ್ಮ ಜಿಲ್ಲಾ ಕೇಂದ್ರಗಳಲ್ಲೇ ಬಿಡಾರ ಹೂಡಿದ್ದಾರೆ.

ಇದರ ಸುಳಿವರಿತ ಜಾರಕಿಹೊಳಿ ಕಳೆದ ಎರಡು ದಿನಗಳ ಹಿಂದೆ ತುಮಕೂರಿಗೆ ತೆರಳಿ ಡಾ.ಪರಮೇಶ್ವರ್ ಅವರನ್ನು ಭೇಟಿ ಮಾಡಿ ಗೌಪ್ಯ ಮಾತುಕತೆ ನಡೆಸಿದರು.

ಇಂದು ಮೈಸೂರಿಗೆ ತೆರಳಿ ಡಾ.ಮಹದೇವಪ್ಪ ಅವರೊಂದಿಗೆ ಚರ್ಚಿಸಿದ ಜಾರಕಿಹೊಳಿ ತಮ್ಮಲ್ಲಿನ ಒಗ್ಗಟ್ಟು ಕಾಪಾಡುವ ಹಾಗೂ ವಿಶ್ವಾಸ ಗಳಿಸುವಲ್ಲಿ ಪ್ರಯತ್ನ ಮುಂದುವರೆಸಿದ್ದಾರೆ.

ಕಳೆದ ಎರಡು ದಿನಗಳಿಂದ ನಗರದಲ್ಲೇ ಬಿಡಾರ ಹೂಡಿದ್ದ ಜಾರಕಿಹೊಳಿ ಕೆಲವು ಸಚಿವರು ಮತ್ತು ಶಾಸಕರ ಜೊತೆಯೂ ಗೌಪ್ಯ ಮಾತುಕತೆ ನಡೆಸಿದ್ದರು.

ಸಿದ್ದರಾಮಯ್ಯ ಮಾತ್ರ ತಮಗೇನೂ ತಿಳಿದಿಲ್ಲ ಎನ್ನುವಂತಿದ್ದು, ಅಗತ್ಯ ಕಂಡುಬಂದಲ್ಲಿ ಪರ್ಯಾಯ ನಾಯಕತ್ವಕ್ಕೆ ವೇದಿಕೆ ಸಿದ್ಧ ಪಡಿಸುತ್ತಿದ್ದಾರೆ.

ಮತ್ತೊಂದೆಡೆ ಕೆಪಿಸಿಸಿ ಅಧ್ಯಕ್ಷರಾಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಂದೆ ಅವಕಾಶ ದೊರೆಯುವುದಾದರೆ ವರಿಷ್ಠರು ತಮ್ಮನ್ನು ಕೈಬಿಡುವುದಿಲ್ಲ ಎಂಬ ತುಂಬು ವಿಶ್ವಾಸದಲ್ಲಿದ್ದಾರೆ.

ಇದರ ನಡುವೆಯೇ ತಮ್ಮ ಸಹೋದರ ಹಾಗೂ ಮಾಜಿ ಸಂಸದ ಡಿ.ಕೆ.ಸುರೇಶ್ ಮೂಲಕವೂ ಬಹಳ ಗೌಪ್ಯವಾಗಿ ತಮಗೆ ಅಧಿಕಾರ ತಪ್ಪದಂತೆ ಜಾಗ್ರತೆ ವಹಿಸಿದ್ದಾರೆ. ಸುರೇಶ್ ನಿನ್ನೆ ಸತೀಶ್ ನಿವಾಸಕ್ಕೆ ತೆರಳಿ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಚರ್ಚೆ ಮಾಡಿದ್ದಾರೆ, ಆದರೆ, ಮಾತುಕತೆ ವಿವರ ತಿಳಿದುಬಂದಿಲ್ಲ.

## ನಗರದಲ್ಲಿ ಇಂದು ವೀಣಾ ಶಾರದಾಲಂಕಾರ

ಎಸ್.ನಿಜಲಿಂಗಪ್ಪ ಬಡಾವಣೆ ರಿಂಗ್ ರಸ್ತೆಯ ಶಾರದಾಂಬಾ ಸರ್ಕಲ್ ಬಳಿ ಇರುವ ಶ್ರೀ ಗಣಪತಿ, ಶ್ರೀ ಶಾರದಾಂಬಾ, ಶ್ರೀ ಚಂದ್ರಮೌಳೀಶ್ವರ ಮತ್ತು ಶ್ರೀ ಶಂಕರಾಚಾರ್ಯರ ದೇವಸ್ಥಾನದಲ್ಲಿ ಶರನ್ನವರಾತ್ರಿ ಮಹೋತ್ಸವದ ಅಂಗವಾಗಿ ಇಂದು ವೀಣಾ ಶಾರದಾಲಂಕಾರ ಮಾಡಲಾಗುವುದು. ಬೆಳಿಗ್ಗೆ 8 ಕ್ಕೆ ಸರಸ್ವತೀ ಸೂಕ್ತ ಹೋಮಗಳು, ಸಂಜೆ 5 ರಿಂದ 6 ರವರೆಗೆ ಶಿವನ ಹಾಡುಗಳ ಗಾಯನ, ಸಂಜೆ 6 ಕ್ಕೆ 'ಶ್ರೀ ಶಂಕರಾಚಾರ್ಯ ವಿರಚಿತ 'ಶ್ರೀ ಲಕ್ಷ್ಮೀನೃಸಿಂಹ ಕರಾವಲಂಬ ಸ್ತೋತ್ರ' ಕುರಿತು ಶಿವಮೊಗ್ಗದ ವಿದ್ವಾನ್ ಎಂ.ಎಸ್. ವಿನಾಯಕ ಉಪನ್ಯಾಸ ನೀಡಲಿದ್ದಾರೆ.

## ನಗರದ ಇಂದು ಶಂಕರ ಮಠದಲ್ಲಿ ಹೋಮ

ಜಯದೇವ ವೃತ್ತದ ಬಳಿ ಇರುವ ಶಂಕರಮಠದಲ್ಲಿ ಶ್ರೀ ಶಾರದಾ ಶರನ್ನವರಾತ್ರ್ಯುತ್ಸವದ ಅಂಗವಾಗಿ ಇಂದು ಬೆಳಿಗ್ಗೆ 8.30 ಕ್ಕೆ ಕಾಲರಾತ್ರಿ ಆರಾಧನೆ, ಚಂಡಿಕಾ ಹೋಮ, ಪುಸ್ತಕೇಷು ಸರಸ್ವತಿ ಪೂಜಾ ಸುಮಂಗಲಿ ಕನ್ನಿಕಾ ಪೂಜೆ, 12.30 ಕ್ಕೆ ಪೂರ್ಣಹುತಿ, ಪ್ರಸಾದ ವಿನಿಯೋಗ, ಸಂಜೆ 6 ರಿಂದ 8 ರವರೆಗೆ ದುರ್ಗಾ ದೀಪ ನಮಸ್ಕಾರ, ಅಷ್ಟಾವಧಾನ ಸೇವೆ, ಸಪ್ತಶತಿ ಪಾರಾಯಣ, ದೀಪಾರಾಧನೆ, 8.30 ಕ್ಕೆ ಪ್ರಸಾದ ವಿನಿಯೋಗವಿರುತ್ತದೆ.

**ಭದ್ರಾ ಜಲಾಶಯ**

ನೀರಿನ ಮಟ್ಟ : 186,
ಒಳ ಹರಿವು : 4287 ಕ್ಯೂಸೆಕ್ಸ್,
ಹೊರ ಹರಿವು : 3986 ಕ್ಯೂಸೆಕ್ಸ್
ಕಳೆದ ವರ್ಷ : 158.2 ಅಡಿ

# ಸ್ವಾಸ್ಥ್ಯ ಸಮಾಜದ ನಿರ್ಮಾಣದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ

### ಮಲೇಬೆನ್ನೂರು : ವೀರಭದ್ರೇಶ್ವರ ಟ್ರಸ್ಟ್ ಸಮಿತಿ ಉಪಾಧ್ಯಕ್ಷ ಬಿ.ನಾಗೇಂದ್ರಪ್ಪ ಶ್ಲಾಘನೆ



ಮಲೇಬೆನ್ನೂರು, ಅ.8- ಸ್ತ್ರೀ ಸಬಲೀಕರಣ, ಕೃಷಿ ಉತ್ತೇಜನ, ಹೈನುಗಾರಿಕೆ, ಕರಕುಶಲತೆ ಮುಂತಾದ ಸಾಮಾಜಿಕ ಕಾರ್ಯಕ್ರಮಗಳ ಮೂಲಕ ಸ್ವಾಸ್ಥ್ಯ ಸಮಾಜದ ನಿರ್ಮಾಣಕ್ಕೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಶ್ರಮಿಸುತ್ತಿದೆ ಎಂದು ವೀರಭದ್ರೇಶ್ವರ ಟ್ರಸ್ಟ್ ಸಮಿತಿಯ ಉಪಾಧ್ಯಕ್ಷ ಬಿ.ನಾಗೇಂದ್ರಪ್ಪ ಹೇಳಿದರು.

ಅವರು ಸೋಮವಾರ ಪಟ್ಟಣದ ಹೊರವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನ ವಿಕಾಸ ಕಾರ್ಯಕ್ರಮದಡಿ ಹಮ್ಮಿಕೊಂಡಿದ್ದ ತಾಲ್ಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ ಉದ್ಘಾಟಿಸಿ ಅವರು ಮಾತನಾಡಿದರು.

ದಾವಣಗೆರೆಯ ಹಿರಿಯ ವಕೀಲರಾದ ಶ್ರೀಮತಿ ಅನಿತಾ ಮಾತನಾಡಿ, ಮಹಿಳೆಯರು ಇತ್ತೀಚೆಗೆ ಹೆಚ್ಚೆಚ್ಚು ವಿದ್ಯಾವಂತರಾಗಿರುವುದು ಸಂತೋಷಕರ. ಇದರಿಂದ ಆರೋಗ್ಯಯುತ ಸಮಾಜ ನಿರ್ಮಾಣ ಸಾಧ್ಯ. ಕಾನೂನು ಅರಿವೂ ಸಹ ಅಗತ್ಯವಿದೆ. ಇಂತಹ ಜ್ಞಾನ ವಿಕಾಸ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಮಹಿಳಾ ಹಕ್ಕು ಬಾಧ್ಯತೆಗಳನ್ನು ಗ್ರಹಿಸಿ ಬದುಕಿಗೆ ಅಳವಡಿಸಿಕೊಂಡು ಮಹಿಳೆಯರು ಮುಖ್ಯವಾಹಿನಿಗೆ ಬರಬೇಕೆಂದು ತಿಳಿಸಿದರು.

ಮಲೇಬೆನ್ನೂರು ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ ಮಾತನಾಡಿ, ಮಹಿಳೆಯರು ಪೌಷ್ಟಿಕ ಆಹಾರ ಸೇವಿಸುವ ಮೂಲಕ ಆರೋಗ್ಯವಂತ ಮಗುವನ್ನು ಪಡೆಯಬೇಕು. ಏನೇ ಆರೋಗ್ಯ ಸಮಸ್ಯೆ ಇದ್ದಲ್ಲಿ ಹತ್ತಿರದ ಆರೋಗ್ಯ ಕೇಂದ್ರವನ್ನು ಸಂಪರ್ಕಿಸಿ ಎಂದು ತಿಳಿಸಿದರು.

ಮಲೇಬೆನ್ನೂರು ಪೋಲಿಸ್ ಠಾಣೆಯ ಎಎಸ್ಐ ಶ್ರೀನಿವಾಸ್ ಮಾತನಾಡಿ, ಸಾಮರಸ್ಯದಿಂದ ಸಂಸಾರಗಳಲ್ಲಿ ಅವಿನಾಭಾವ ಸಂಬಂಧ ಇರುತ್ತದೆ. ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶದ ಅರಿವನ್ನು ತಾಯಂದಿರು, ಮಕ್ಕಳಲ್ಲಿ ಮೂಡಿಸಬೇಕೆಂದು ತಿಳಿಸಿದರು.

ಯೋಜನೆಯ ಜಿಲ್ಲಾ ನಿರ್ದೇಶಕ ಎಂ. ಲಕ್ಷ್ಮಣ್, ಪ್ರಾದೇಶಿಕ ಕಛೇರಿಯ ಜ್ಞಾನ ವಿಕಾಸ ಯೋಜನಾಧಿಕಾರಿ ರತ್ನ ಮೈಪಾಲ್, ಅಧ್ಯಾತ್ಮ ಚಿಂತಕ ಹೊಳೆಸಿರಿಗೆರೆ ಸಿದ್ದೇಶ್ ಮಾತನಾಡಿದರು.

ಜಿಲ್ಲಾ ಜನಜಾಗೃತಿ ವೇದಿಕೆ ಉಪಾಧ್ಯಕ್ಷ ಹೊಳೆಸಿರಿಗೆರೆ ನಾಗನಗೌಡ್ರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ, ಮೇಲ್ವಿಚಾರಕರಾದ ಸಂಪತ್ ಲಕ್ಷ್ಮಿ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಸವಿತಾ, ಜ್ಞಾನ ವಿಕಾಸ ಒಕ್ಕೂಟದ ಅಧ್ಯಕ್ಷರಾದ ಸುಧಾ, ಸದಸ್ಯರಾದ ಸುಮ ಸೇರಿದಂತೆ ಇತರರು ಭಾಗವಹಿಸಿದ್ದರು.

# ಪೋಕ್ಸೋ: ಬಿಎಸ್‌ವೈ ವಿರುದ್ಧ ಏಕೆ ಕ್ರಮವಿಲ್ಲ ?

**ಸಚಿವ ದಿನೇಶ್ ಗುಂಡೂರಾವ್**



ಬೆಂಗಳೂರು, ಅ. 8 - ಪೋಕ್ಸೋ ಪ್ರಕರಣದಲ್ಲಿ ಆರೋಪಿಯಾಗಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಬಿಜೆಪಿ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಟೀಕಿಸಿದ್ದಾರೆ.

ನೃತ್ಯ ಸಂಯೋಜಕ ಜಾನಿ ಮಾಸ್ಟರ್ ವಿರುದ್ಧ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿರುವುದನ್ನು ಉಲ್ಲೇಖಿಸಿ ಅವರಿಗೆ ಘೋಷಣೆಯಾಗಿದ್ದ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯನ್ನು ಕೇಂದ್ರ ಸರ್ಕಾರ ತಡೆದಿತ್ತು. ಕೇಂದ್ರ ಸರ್ಕಾರದ ಈ ಕ್ರಮ ಶ್ಲಾಘನೀಯ. ಆದರೆ ಯಡಿಯೂರಪ್ಪ ವಿರುದ್ಧದ ಪ್ರಕರಣದಲ್ಲಿ ಭಿನ್ನ ನಿಲುವು ಏಕೆ? ಎಂದು ಸಚಿವರು ಪ್ರಶ್ನಿಸಿದ್ದಾರೆ. ಲೈಂಗಿಕ ಕಿರುಕುಳ ಆರೋಪ, ತನಿಖೆ ಅಥವಾ ವಿಚಾರಣೆ ಎದುರಿಸುತ್ತಿರುವ ಯಾರನ್ನೂ ಗೌರವಿಸಬಾರದು. ಜಾನಿ ಮಾಸ್ಟರ್ ಪ್ರಕರಣದಲ್ಲಿ ಕೇಂದ್ರ ಸರ್ಕಾರ ಉತ್ತಮ ನಿರ್ಧಾರ ತೆಗೆದುಕೊಂಡಿದೆ. ಆದರೆ, ಯಡಿಯೂರಪ್ಪನವರ ವಿಷಯಕ್ಕೆ ಬಂದಾಗ ಪಕ್ಷವು ಅದೇ ಮಾನದಂಡವನ್ನು ಅನುಸರಿಸಿಲ್ಲ ಎಂದು ಆರೋಗ್ಯ ಸಚಿವರು ಹೇಳಿದ್ದಾರೆ.

ವಿಶೇಷವಾಗಿ 17 ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಗಂಭೀರ ಆರೋಪವನ್ನು ಎದುರಿಸುತ್ತಿರುವ ಯಡಿಯೂರಪ್ಪ ವಿರುದ್ಧ ಬಿಜೆಪಿ ಏಕೆ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ? ಯಡಿಯೂರಪ್ಪ ವಿರುದ್ಧದ ಪೋಕ್ಸೋ ಪ್ರಕರಣದಲ್ಲಿ 200 ಪುಟಗಳ ಆರೋಪ ಪಟ್ಟಿಯನ್ನು ಪೊಲೀಸರು ಸಲ್ಲಿಸಿದ್ದಾರೆ. ಆದರೂ ಏಕೆ ಯಡಿಯೂರಪ್ಪ ವಿಚಾರದಲ್ಲಿ ಬಿಜೆಪಿ ಬೇರೆ ತರಹ ನಡೆದುಕೊಳ್ಳುತ್ತಿದೆ? ಇದು ಸಾಮಾನ್ಯವಾದ ವಿಷಯ ಅಲ್ಲವೇ ಅಲ್ಲ. ಯಡಿಯೂರಪ್ಪ ಹತ್ತಿರ ಸಹಾಯಕ್ಕೆ ಹೋದ ಹುಡುಗಿ ಮೇಲೆಯೇ ಲೈಂಗಿಕ ದೌರ್ಜನ್ಯ ಆಗಿದೆ. ಇದನ್ನು ಬಹಳ ಹಗುರವಾಗಿ ತೆಗೆದುಕೊಳ್ಳಬಾರದು ಎಂದರು.

ಯಡಿಯೂರಪ್ಪ ಅವರನ್ನು ಸಂಸದೀಯ ಸಮಿತಿಯ ಸ್ಥಾನದಿಂದ ಕೆಳಗಿಳಿಸುವ ಕನಿಷ್ಠ ಕ್ರಮವನ್ನು ಬಿಜೆಪಿ ತೆಗೆದುಕೊಳ್ಳಬೇಕು. ಇಂತಹ ಗಂಭೀರ ಆರೋಪಗಳು ಇರುವಾಗ, ವಿಶೇಷವಾಗಿ ಮಹಿಳೆಯರಿಗೆ ಸಂಬಂಧಿಸಿದ ವಿಷಯವನ್ನು ಬಿಜೆಪಿ ಏಕೆ ಹಗುರವಾಗಿ ತೆಗೆದುಕೊಳ್ಳುತ್ತಿದೆ? ಎಂದು ದಿನೇಶ್ ಗುಂಡೂರಾವ್ ಪ್ರಶ್ನಿಸಿದ್ದಾರೆ.

# ಅತಿಯಾದ ಆತ್ಮವಿಶ್ವಾಸ, ಒಡಕಿನಿಂದ ಕಾಂಗ್ರೆಸ್‌ಗೆ ಹಿನ್ನಡೆ

## ಮುಂಬರುವ ವಿಧಾನಸಭಾ ಚುನಾವಣೆಗಳಲ್ಲೂ ಪರಿಣಾಮ ಬೀರುವ ಸಾಧ್ಯತೆ

ನವದೆಹಲಿ, ಅ. 8 - ಅತಿಯಾದ ಆತ್ಮವಿಶ್ವಾಸ, ಪಕ್ಷದಲ್ಲಿನ ಒಡಕು ಹಾಗೂ ಒಂದು ಸಮುದಾಯದ ಮೇಲಿನ ಅತಿಯಾದ ಅವಲಂಬನೆ ಕಾರಣದಿಂದಾಗಿ ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹಿನ್ನಡೆ ಕಂಡಿದೆ ಎಂದು ರಾಜಕೀಯ ವಲಯಗಳಲ್ಲಿ ವಿಶ್ಲೇಷಣೆ ಮಾಡಲಾಗುತ್ತಿದೆ.

ಹರಿಯಾಣದಲ್ಲಿ ಬಿಜೆಪಿ ಹತ್ತು ವರ್ಷಗಳ ಕಾಲ ಆಡಳಿತ ನಡೆಸಿತ್ತು. ಇಲ್ಲಿ ಬಿಜೆಪಿಗೆ ಆಡಳಿತ ವಿರೋಧಿ ಅಲೆ ಇದೆ ಎಂದು ಕಾಂಗ್ರೆಸ್ ಪ್ರಮುಖವಾಗಿ ಬಿಂಬಿಸಿತ್ತು. ಹರಿಯಾಣದಲ್ಲಿ ಸುಲಭದ ಜಯ ಲಭ್ಯವಾಗಲಿದೆ ಎಂದು ಕಾಂಗ್ರೆಸ್ ನಾಯಕರು ಭಾವಿಸಿದ್ದರು. ಆದರೆ, ಹರಿಯಾಣದಲ್ಲಿ ತೀವ್ರ ಮುಖಭಂಗ ಎದುರಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಜೊತೆ ಮಾಡಿಕೊಂಡ ಮೈತ್ರಿ ಕಾರಣದಿಂದಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಆದರೆ ರಾಜ್ಯದಲ್ಲಿ ಕಾಂಗ್ರೆಸ್ ಕೇವಲ ಆರು ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಮತ್ತೊಂದೆಡೆ ನ್ಯಾಷನಲ್ ಕಾನ್ಫರೆನ್ಸ್ 42 ಸ್ಥಾನ ಗೆಲ್ಲುವ ಮೂಲಕ ಪ್ರಬಲ ಪಕ್ಷವಾಗಿದೆ.

ಹರಿಯಾಣದಲ್ಲಿ ಕಾಂಗ್ರೆಸ್ ಶೇ. 39 ರಷ್ಟು ಮತಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದೆ. ಬಿಜೆಪಿಗಿಂತ ಕೇವಲ ಶೇಕಡ ಒಂದರಷ್ಟು ಕಡಿಮೆ ಮತಗಳನ್ನು ಪಡೆದಿದೆ. ಆದರೆ, ಅಧಿಕಾರದ ಗದ್ದುಗೆ ಹಿಡಿಯಲು ಸಾಧ್ಯವಾಗಿಲ್ಲ.

ಪಕ್ಷದಲ್ಲಿನ ಆಂತರಿಕ ಬಿಕ್ಕಟ್ಟು, ನಾಯಕರಲ್ಲಿದ್ದ ಅತಿಯಾದ ಆತ್ಮವಿಶ್ವಾಸ ಹಾಗೂ ಜಾಟ್ ಮತಗಳ ಅತಿಯಾದ ಅವಲಂಬನೆ ಪಕ್ಷದ ಸೋಲಿಗೆ ಕಾರಣವಾಗಿದೆ ಎಂದು ಹೇಳಲಾಗುತ್ತಿದೆ.

ಸಮುದಾಯದ ಹಿರಿಯ ನಾಯಕ ಭೂಪಿಂದರ್ ಸಿಂಗ್ ಹೂಡ ಅವರು ಪ್ರಸಕ್ತ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವ ವಹಿಸಿದ್ದರು. ಆದರೆ ದಲಿತ ನಾಯಕಿ ಕುಮಾರಿ ಸೆಲ್ಜಾ ಅವರು ಹೂಡ ಬಗ್ಗೆ ತೀವ್ರ ಅಸಮಾಧಾನ ಹೊಂದಿದ್ದರು. ಮುಖ್ಯಮಂತ್ರಿ ಸ್ಥಾನ ತಮಗೆ ಸಿಗಬೇಕು ಎಂದು ಉಭಯ ನಾಯಕರು ಇಂಗಿತ ವ್ಯಕ್ತಪಡಿಸಿದ್ದರು. ಇದು ಮತದಾರರ ಮನಸ್ಸಿನಲ್ಲಿ ಗೊಂದಲಕ್ಕೆ ಕಾರಣವಾಗಿತ್ತು.

ಚುನಾವಣಾ ಪ್ರಚಾರದಲ್ಲಿ ಸೆಲ್ಜಾ ಹೆಚ್ಚೇನು ಉತ್ಸಾಹ ತೋರಿರಲಿಲ್ಲ. ಇದು ಪಕ್ಷದ ಹಿನ್ನಡೆಗೆ ಕಾರಣವಾಯಿತು ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ. ರಾಜ್ಯದ 90 ವಿಧಾನಸಭಾ ಕ್ಷೇತ್ರಗಳ ಪೈಕಿ 72 ಕ್ಷೇತ್ರಗಳ ಟಿಕೆಟ್ ಅನ್ನು ಹೂಡ ಸಲಹೆಯಂತೆ ವಿತರಿಸಲಾಗಿತ್ತು. ಸೆಲ್ಜಾ ಅವರು ತಮ್ಮ ತವರು ನೆಲೆಯಾದ ಸಿರ್ಸಾದ ಅಭ್ಯರ್ಥಿಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಲೂ ಸಹ ಸಾಧ್ಯವಾಗಿರಲಿಲ್ಲ.

ಚುನಾವಣೆಗೆ ಸಾಕಷ್ಟು ಮೊದಲೇ ಕಾಂಗ್ರೆಸ್ ನಾಯಕರು ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದ್ದರು. 10 ವರ್ಷಗಳ ಬಿಜೆಪಿ ಆಡಳಿತ ಇರುವ ಕಾರಣ, ಆಡಳಿತ ವಿರೋಧಿ ಭಾವನೆಯಿಂದ ಸುಲಭವಾಗಿ ಜಯ ಸಾಧ್ಯವಾಗಲಿದೆ ಎಂದು ಭಾವಿಸಿದ್ದರು.

ಜವಾನ್ - ಕಿಸಾನ್ - ಪೆಹಲ್ವಾನ್ ಎಂಬ ಘೋಷಣೆ ಅಡಿ ಕಾಂಗ್ರೆಸ್ ಪಕ್ಷ ಪ್ರಚಾರ ನಡೆಸಿತ್ತು. ಜಾಟ್ ಸಮುದಾಯದ ಮೇಲೆ ಅತಿಯಾಗಿ ಅವಲಂಬಿಸಿತ್ತು. ಆದರೆ ಕಾಂಗ್ರೆಸ್ ಪ್ರಚಾರ ನಿರೀಕ್ಷಿತ ಫಳ ನೀಡಿಲ್ಲ. ಜಾಟ್ ಪ್ರಾಬಲ್ಯ ಇರುವ ಹಲವಾರು ಕ್ಷೇತ್ರಗಳಲ್ಲೇ ಸೋಲು ಎದುರಾಗಿದೆ.

ಕರ್ನಾಟಕ ಹಾಗೂ ಹಿಮಾಚಲ ಪ್ರದೇಶಗಳ ಚುನಾವಣೆ ರೀತಿಯಲ್ಲಿ ಹರಿಯಾಣದಲ್ಲೂ ಕಾಂಗ್ರೆಸ್ ಹಲವಾರು ಗ್ಯಾರಂಟಿಗಳನ್ನು ಘೋಷಿಸಿತ್ತು. ಈ ಗ್ಯಾರಂಟಿಗಳು ಸಹ ಪಕ್ಷಕ್ಕೆ ಹೆಚ್ಚಿನ ನೆರವು ನೀಡಿಲ್ಲ.

ಪಕ್ಷಾಂತರಿ ಅಶೋಕ್ ತನ್ವರ್ ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡಿದ್ದೂ ಸಮಸ್ಯೆ ತಂದಿತು. ಕುಮಾರಿ ಸೆಲ್ಜಾ ಅವರನ್ನು ಮೂಲೆಗುಂಪು ಮಾಡಲು ದಲಿತ ಮುಖಂಡ ತನ್ವರ್ ಕರೆ ತರಲಾಗಿದೆ ಎಂಬ ಭಾವನೆ ಪಕ್ಷದಲ್ಲಿ ಮೂಡಿತ್ತು.

ಹರಿಯಾಣ ಫಲಿತಾಂಶವು ಜಾರ್ಖಂಡ್ ಹಾಗೂ ಮಹಾರಾಷ್ಟ್ರಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸಮಸ್ಯೆ ತರಲಿದೆ. ಈ ರಾಜ್ಯಗಳ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚು ಸ್ಥಾನ ಬಿಟ್ಟುಕೊಡಲು ಮಿತ್ರ ಪಕ್ಷಗಳು ಚೌಕಾಸಿ ನಡೆಸಬಹುದಾಗಿದೆ.

ಹತ್ತು ವರ್ಷಗಳ ಆಡಳಿತ ವಿರೋಧಿ ಮನೋಭಾವದ ಲಾಭ ಪಡೆಯಲಾಗದ ಕಾಂಗ್ರೆಸ್ ಪಕ್ಷಕ್ಕೆ ಏಕೆ ಹೆಚ್ಚು ಸ್ಥಾನ ನೀಡಬೇಕು ಎಂದು ಐ.ಎನ್.ಡಿ.ಐ.ಎ. ಮಿತ್ರ ಪಕ್ಷಗಳು ಪ್ರಶ್ನಿಸಬಹುದಾಗಿದೆ.

# ಘನತೆಗೆ ಧಕ್ಕೆ ಆಗಿರುವ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು



**ನಮ್ಮ ಪಕ್ಷದವರೇ ಕಾಂಗ್ರೆಸ್ ಮುಖಂಡರನ್ನು ಭೇಟಿ ಮಾಡುತ್ತಿರುವಾಗ, ಜಾರಕಿಹೊಳಿ-ಮಹಾದೇವಪ್ಪ ಮಾತಾಡಿದರೆ ತಪ್ಪೇನಿದೆ ?**
**- ಜಿ.ಎಂ. ಸಿದ್ದೇಶ್ವರ**

ಹರಿಹರ, ಅ.8 - ನಮ್ಮ ಪಕ್ಷದ ಮುಖಂಡರೇ ಕಾಂಗ್ರೆಸ್ ಪಕ್ಷದ ಮುಖಂಡರನ್ನು ಭೇಟಿ ಮಾಡುತ್ತಿರುವಾಗ, ಅವರ ಪಕ್ಷದ ಮುಖಂಡರು, ಅವರದೇ ಪಕ್ಷದ ಮುಖಂಡರನ್ನು ಭೇಟಿ ಮಾಡಿ ಮಾತನಾಡುವುದರಲ್ಲಿ ತಪ್ಪೇನಿದೆ ಎಂದು ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ನಗರದ ಶಿವಮೊಗ್ಗ ರಸ್ತೆಯ ಹರ ವಿವಿಧೋದ್ದೇಶ ಸಹಕಾರ ಸಂಘದ ಆವರಣದಲ್ಲಿ ಬಿಜೆಪಿ ಪಕ್ಷದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಪತ್ರಕರ್ತರ ಪ್ರಶ್ನೆಗೆ ಅವರು ಉತ್ತರಿಸಿದರು.

ನಮ್ಮ ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ, ಕಾಂಗ್ರೆಸ್ ಪಕ್ಷದ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ನಿನ್ನೆ ಭೇಟಿ ಮಾಡಿ ಮಾತನಾಡಿರುವಾಗ, ಸತೀಶ್ ಜಾರಕಿಹೊಳಿ, ತಮ್ಮದೇ ಪಕ್ಷದ ಸಚಿವ ಮಹಾದೇವಪ್ಪನವರನ್ನು ಭೇಟಿ ಮಾಡಿ ಮಾತನಾಡಿರುವುದರಲ್ಲಿ ತಪ್ಪು ಏನಿದೆ ? ಎಂದು ಹೇಳಿದರು.

ಮುಡಾ ಹಗರಣದಲ್ಲಿ ಸಿಲುಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಘನತೆಗೆ ಧಕ್ಕೆ ತಂದುಕೊಂಡಿದ್ದು, ಈ ಕೂಡಲೇ ರಾಜೀನಾಮೆ ಕೊಡಬೇಕು ಎಂದು ಹೇಳಿದರು.

ಜಿಲ್ಲೆಯಲ್ಲಿ ಕಳೆದ ಬಾರಿಗಿಂತ ಈ ಬಾರಿ ಹೆಚ್ಚು ಸದಸ್ಯತ್ವವನ್ನು ಮಾಡಬೇಕೆಂಬ ಗುರಿ ಹೊಂದಲಾಗಿದೆ ಎಂದು ಹೇಳಿದರು

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಈಗಾಗಲೇ ತಾಲ್ಲೂಕಿನ ಚಿಕ್ಕಬಿದರಿ, ಸಾರಥಿ, ದೀಟೂರು, ಕೊಂಡಜ್ಜಿ, ದೇವರಬೆಳಕೆರೆ, ಹರಳಹಳ್ಳಿ, ಹಾಲಿವಾಣ ಕುಂಬಳೂರು ಸೇರಿದಂತೆ ಇತರೆ ಗ್ರಾಮೀಣ ಪ್ರದೇಶಗಳಲ್ಲಿ ಸದಸ್ಯತ್ವ ಅಭಿಯಾನ ಮಾಡಲಾಗಿದ್ದು, ಹರಿಹರ ನಗರದಲ್ಲಿಯೂ ಸದಸ್ಯತ್ವ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದರು.

ಕಾಂಗ್ರೆಸ್ ಸರ್ಕಾರ ಜಾತಿ ಗಣತಿ ಕಾರ್ಯವನ್ನು ಮತ್ತೆ ಮುನ್ನೆಡೆಗೆ ತರುವುದಕ್ಕೆ ಮುಂದಾಗಿದ್ದು, ಈ ಸಮಯದಲ್ಲಿ ಉಪ ಜಾತಿ ಜನಸಂಖ್ಯೆ ಹೆಚ್ಚು ಇರುವ ಕಡೆಗಳಲ್ಲಿ ಜಾತಿ ಗಣತಿ ಮಾಡಿ, ಮುಖ್ಯ ಜಾತಿ ಜನಾಂಗದ ಜನಸಂಖ್ಯೆ ಹೆಚ್ಚು ಇರುವ ಕಡೆಗಳಲ್ಲಿ ಸರ್ವೆ ಮಾಡದೇ ತಮಗೆ ಇಷ್ಟ ಬಂದಂತೆ ಸರ್ವೆ ಮಾಡಿದ್ದಾರೆ. ಹಾಗಾಗಿ ಇದನ್ನು ನಾನು ಸಂಪೂರ್ಣವಾಗಿ ವಿರೋಧಿಸುವುದಾಗಿ ಹೇಳಿದರು.

ಜಿಪಂ ಮಾಜಿ ಅಧ್ಯಕ್ಷ ಎಸ್ ಎಂ. ವೀರೇಶ್ ಹನಗವಾಡಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮುಡಾ ಹಗರಣವನ್ನು ಮುಚ್ಚಿ ಹಾಕುವ ದೃಷ್ಟಿಯಿಂದ, ಜನರಿಗೆ ದಿಕ್ಕು ಬದಲಿಸಲು ಜಾತಿಗಣತಿ ವಿಚಾರವನ್ನು ಮುಂದೆ ತರುವುದಕ್ಕೆ ಮುಂದಾಗಿದ್ದಾರೆ ಎಂದು ಹೇಳಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಣ್ಣಪ್ಪ ಐರಣಿ ಮಾತನಾಡಿ, ಈಗಾಗಲೇ ಜಿಲ್ಲೆಯಲ್ಲಿ 62410 ಜನರು ಸದಸ್ಯತ್ವವನ್ನು ಹೊಂದಿದ್ದು, ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಲ್ಲಿ 50 ಸಾವಿರ ಸದಸ್ಯತ್ವದ ಗುರಿಯನ್ನು ಹೊಂದಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಪ್ರಧಾನ ಕಾರ್ಯದರ್ಶಿ ತುಳಜಪ್ಪ ಭೂತೆ, ಗ್ರಾಮೀಣ ಘಟಕದ ಅಧ್ಯಕ್ಷ ಲಿಂಗರಾಜ್ ಹಿಂಡಸಗಟ್ಟ, ಕಾರ್ಯದರ್ಶಿ ಮಹಾಂತೇಶ್, ಮುಖಂಡರಾದ ನಂದಿಗಾವಿ ರಮೇಶ್, ಕೆಂಚನಹಳ್ಳಿ ಮಹಾಂತೇಶ್, ಸಾಕ್ಷಿ, ರವಿರಾಯ್ಕರ್, ವಿನಾಯಕ ಆರಾಧ್ಯಮಠ, ಗಣೇಶ, ಶಶಿಧರ್ ಮತ್ತು ಇತರರು ಹಾಜರಿದ್ದರು.

## ಹೊನ್ನಾಳಿ : ಹರಿಯಾಣ ಗೆಲುವಿಗೆ ಬಿಜೆಪಿ ವಿಜಯೋತ್ಸವ



ಹೊನ್ನಾಳಿ, ಅ. 8 - ಹರಿಯಾಣ ರಾಜ್ಯದ ಬಿಜೆಪಿಯ ಗೆಲುವಿಗೆ ಹೊನ್ನಾಳಿ ಬಿಜೆಪಿ ಮುಖಂಡ ಎಂ.ಆರ್. ಮಹೇಶ್ ನೇತೃತ್ವದಲ್ಲಿ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಲಾಯಿತು.

ಎಂ.ಆರ್. ಮಹೇಶ್ ಮಾತನಾಡಿ, ಹರಿಯಾಣ ಮತದಾರರು ಪಕ್ಷದ ಮುಖಂಡರಾದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಪಕ್ಷದ ಮುಖಂಡರಾದ ನಡ್ಡಾ ಅವರ ಜನಪರ ಆಡಳಿತವನ್ನು ಮೆಚ್ಚಿ ಮೂರನೇ ಬಾರಿಗೆ ಪಕ್ಷದ ಗೆಲುವಿಗೆ ಮತ ನೀಡಿ ಬೆಂಬಲಿಸಿದ್ದು, ಲೋಕಸಭಾ ಚುನಾವಣೆಯ ನಂತರದ ದಿನಗಳಲ್ಲಿ ಜಾಗೃತಗೊಂಡ ಅಲ್ಲಿನ ಮತದಾರರು ಹರಿಯಾಣದ 90 ಕ್ಷೇತ್ರಗಳಲ್ಲಿ 48 ಅಭ್ಯರ್ಥಿಗಳ ಆಯ್ಕೆ ಮಾಡುವ ಮೂಲಕ ಸರಳ ಬಹುಮತದ ತೀರ್ಪನ್ನು ನೀಡಿ ಬೆಂಬಲಿಸಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಕಾರ್ಯಕರ್ತರಾದ ಶಾಂತರಾಜ್ ಪಾಟೀಲ್, ಕುಮಾರ್ ಮಂಜುನಾಥ್, ಸಚಿನ್ ಚಂದ್ರು ಇನ್ನಿತರರು ಇದ್ದರು.

## ನಗರದಲ್ಲಿಂದು ಕನ್ಯಾಪೂಜೆ

ವಿಶ್ವ ಹಿಂದು ಪರಿಷದ್ ಹಾಗೂ ಸಾರ್ವಜನಿಕ ವಿಜಯದಶಮಿ ಮಹೋತ್ಸವದ ಅಂಗವಾಗಿ ಶ್ರೀ ಬೀರಲಿಂಗೇಶ್ವರ ಮೈದಾನದಲ್ಲಿ ಇಂದು 6 ರಿಂದ 7 ರವರೆಗೆ ಪ್ರೇರಣಾ ಸಾಂಸ್ಕೃತಿಕ ಸಂಸ್ಥೆ ವತಿಯಿಂದ 'ಕನ್ಯಾಪೂಜಾ' ಕಾರ್ಯಕ್ರಮ ಹಾಗೂ ಅದಮ್ಯ ಆರ್ಟ್ಸ್ ಫೌಂಡೇಶನ್ ಕನ್ನಡ ಜಾನಪದ ಪರಿಷತ್ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದೆ.

## ನಗರದಲ್ಲಿ ಇಂದು ಚಾಮುಂಡದೇವಿ ಅಲಂಕಾರ

ಶ್ರೀ ಕನ್ಯಕಾಪಮೇಶ್ವರಿ ದೇವಸ್ಥಾನ ಸಂಘದ ವತಿಯಿಂದ ದೇವಸ್ಥಾನದಲ್ಲಿ ಶರನ್ನವರಾತ್ರಿ ಅಂಗವಾಗಿ ಚಾಮುಂಡದೇವಿ ಅಲಂಕಾರ ಮಾಡಲಾಗುವುದು.

ಸಂಜೆ 6.30 ರಿಂದ 12 ವರ್ಷ ಮೇಲ್ಪಟ್ಟ ಮಕ್ಕಳ ವಿದ್ಯಾಭಿವೃದ್ಧಿಗೆ ಹಯಗ್ರೀವ ಪೂಜಾ ಮತ್ತು ವೇಷ ಹಾಗೂ ಸಂಭಾಷಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

**ನಿರ್ಮಲ ರಾಜಶೇಖರ್ ಹುಂಡೇಕಾರ್ ನಿಧನ**



ದಾವಣಗೆರೆ ನಗರದ ಎಂಸಿಸಿ 'ಎ' ಬ್ಲಾಕ್ 5ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆಯ ವಾಸಿ ಶ್ರೀ ರಾಜಶೇಖರ್ ಹುಂಡೇಕಾರ್ ಇವರ ಧರ್ಮಪತ್ನಿ ಶ್ರೀಮತಿ ನಿರ್ಮಲ ರಾಜಶೇಖರ್ ಹುಂಡೇಕಾರ್ (57) ಇವರು ದಿನಾಂಕ 08.10.2024ರ ಮಂಗಳವಾರ ಸಂಜೆ 4ಕ್ಕೆ ನಿಧನರಾದರು. ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 09.10.2024ರ ಬುಧವಾರ ಬೆಳಿಗ್ಗೆ 11.30ಕ್ಕೆ ಗ್ಲಾಸ್ ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ನೇತ್ರದಾನ ಶ್ರೇಷ್ಠದಾನ**

## ಹರಿಹರದಲ್ಲಿ ಮಳೆ : ಮನೆಗಳಿಗೆ ನುಗ್ಗಿದ ನೀರು

ಹರಿಹರ, ಅ. 8- ನಗರದಲ್ಲಿ ತಡ ರಾತ್ರಿ ಧಾರಾಕಾರವಾಗಿ ಮಳೆ ಸುರಿದಿದ್ದು ಹಲವಾರು ಮನೆಗಳಿಗೆ ನೀರು ನುಗ್ಗಿದ ಘಟನೆ ನಡೆಯಿತು. ರಾತ್ರಿ 1 ಗಂಟೆಯ ಸುಮಾರಿಗೆ ಗುಡುಗು ಮಿಂಚಿನಿಂದ ಕೂಡಿದ ಮಳೆ ಆರಂಭಗೊಂಡು, ಬಹಳಷ್ಟು ರಭಸವಾಗಿ ಸುಮಾರು 30 ನಿಮಿಷಕ್ಕಿಂತ ಹೆಚ್ಚು ಸಮಯ ಸುರಿದಿದ್ದು, ಹಲವಾರು ಬಡಾವಣೆಗಳ ಮನೆಗಳಿಗೆ ನೀರು ನುಗ್ಗಿ ಜನಜೀವನ ಅಸ್ತವ್ಯಸ್ತತೆಯಿಂದ ಕೂಡಿತ್ತು. ಮಳೆಯ ರಭಸದಿಂದಾಗಿ ಬೆಸ್ಕಾಂ ಇಲಾಖೆಯವರು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದ್ದು, ಜನರು ಕತ್ತಲೆಯಲ್ಲಿ ರಾತ್ರಿ ಕಳೆಯುವಂತಾಗಿತ್ತು. ಕೆಲವು ಕಡೆಗಳಲ್ಲಿ ಮರಗಳು ನೆಲಕ್ಕೆ ಉರುಳಿ ಬಿದ್ದು ವಾಹನಗಳ ಓಡಾಟಕ್ಕೆ ತೊಂದರೆಗಳು ಆಗಿತ್ತು.

# ಹರಿಹರ ; ನಗರಸಭೆ ಅಧಿಕಾರಿಗಳ ಅಸಹಕಾರ : ಸದಸ್ಯರ ಆಕ್ರೋಶ

ಹರಿಹರ, ಅ. 8- ನಗರಸಭೆ ಆಡಳಿತ ವ್ಯವಸ್ಥೆ ಸಂಪೂರ್ಣ ನಿಷ್ಕ್ರಿಯಗೊಂಡಿದ್ದು, ಇಲ್ಲಿ ಅಧ್ಯಕ್ಷರು ಮತ್ತು ಪೌರಾಯುಕ್ತರಲ್ಲಿ ಯಾರು ಸುಪ್ರೀಂ ಎಂಬುದು ಅರಿಯದಂತಹ ಸ್ಥಿತಿ ನಿರ್ಮಾಣವಾಗಿದೆ ಎಂದು ಸದಸ್ಯ ಆರ್.ಸಿ ಜಾವೇದ್ ದೂರಿದರು.

ನಗರಸಭೆ ಸಭಾಂಗಣದಲ್ಲಿ ಈಚೆಗೆ ನಡೆದ ತುರ್ತು ಸಾಮಾನ್ಯ ಸಭೆಯಲ್ಲಿ ಅವರು ಮಾತನಾಡಿದರು.

ನಗರದಲ್ಲಿನ ಸರ್ಕಾರಿ ಶಾಲೆ, ದೇವಸ್ಥಾನ, ಮಸೀದಿ, ಚರ್ಚ್‌ಗಳಿಗೆ ಉಚಿತವಾಗಿ ಕುಡಿಯುವ ನೀರು ಸರಬರಾಜು ಮಾಡುವಂತೆ ಕಳೆದ ಸಭೆಯಲ್ಲಿ ಮನವಿ ಮಾಡಿಕೊಳ್ಳಲಾಗಿತ್ತು. ಆ ವಿಚಾರಕ್ಕೆ ಸಂಬಂಧಿಸಿದಂತೆ ಸರ್ವ ಸದಸ್ಯರು ಸಹಮತ ವ್ಯಕ್ತಪಡಿಸಿದ್ದರು. ಆದರೆ ಜಲಸಿರಿ ಅಧಿಕಾರಿಗಳು ಪುನಃ ಕುಡಿಯುವ ನೀರಿನ ತೆರಿಗೆ ಕಟ್ಟಿಸಿಕೊಳ್ಳಲು ಮುಂದಾಗಿದ್ದಾರೆ ಎಂದರು.

ಹಿರಿಯ ಸದಸ್ಯ ಎ. ವಾಮನಮೂರ್ತಿ ಮಾತನಾಡಿ, ನಗರದಲ್ಲಿ ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಲಿದೆ. ಜಮೀನು ಖರೀದಿಸಿ ನೀರಿನ ಶೇಖರಣಾ ಘಟಕ ಸ್ಥಾಪನೆ ಮಾಡದಿದ್ದರೆ, ದೊಡ್ಡ ಪ್ರಮಾಣದಲ್ಲಿ ಸಮಸ್ಯೆ ಎದುರಿಸಬೇಕಾಗುತ್ತದೆ ಎಂದು ಗಮನ ಸೆಳೆದರು.

ನಗರಸಭೆ ಸದಸ್ಯ ಶಂಕರ್ ಖಟಾವ್ಕರ್ ಮಾತನಾಡಿ, ನಗರಸಭೆಯಲ್ಲಿ ಯಾವ ಕೆಲಸ ಕೂಡ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ. ದೂಡಾ ಕಚೇರಿ ಆರಂಭಕ್ಕೆ ಮುಂದಾಗಿಲ್ಲ. ಇ-ಸ್ವತ್ತು ದಾಖಲೆಗಳನ್ನು ನೀಡುತ್ತಿಲ್ಲ. ಖಾತೆ ಬದಲಾವಣೆ ಆಗುತ್ತಿಲ್ಲ. ಇಂತಹ ಅನೇಕ ಸಮಸ್ಯೆಗಳು ಇದ್ದು, ಮುಂದಿನ ಸಭೆಯೊಳಗೆ ಸರಿಪಡಿಸಬೇಕು. ಇಲ್ಲವಾದರೆ ನಗರಸಭೆಗೆ ಬೀಗ ಹಾಕಿ ಪ್ರತಿಭಟನೆ ಮಾಡಲಾಗುತ್ತದೆ ಎಂದು ಎಚ್ಚರಿಸಿದರು.

ಸದಸ್ಯೆ ನಾಗರತ್ನ ಮಾತನಾಡಿ, ನಮ್ಮ ಬಡಾವಣೆಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ಒಂದೂ ಕೆಲಸವನ್ನು ಮಾಡಲಿಕ್ಕೆ ಆಗುತ್ತಿಲ್ಲ. ಸಾರ್ವಜನಿಕರು ಮನೆ ಮುಂದೆ ಬಂದು ಛೀಮಾರಿ ಹಾಕುತ್ತಿದ್ದಾರೆ. ರಾಜೀನಾಮೆ ನೀಡಬೇಕು ಎನ್ನುವಷ್ಟು ಬೇಸರ ಆಗಿದೆ. ಅಧಿಕಾರಿ ಮತ್ತು ಸಿಬ್ಬಂದಿ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆಂದು ಕಿಡಿಕಾರಿದರು.

ಸದಸ್ಯ ರಜನಿಕಾಂತ್ ಮಾತನಾಡಿ, ನನ್ನ ವಾರ್ಡಿನಲ್ಲಿ ಸ್ವಚ್ಛತೆಗೆ ಜೆಸಿಬಿ ವಾಹನ ಕಳಿಸಿ ಎಂದು ಹೇಳಿದರೆ ಡೀಸೆಲ್ ಹಾಕಲಿಕ್ಕೆ ಹಣ ಇಲ್ಲ ಎಂದು ಸಂತೋಷ, ರವಿಪ್ರಕಾಶ್ ಹೇಳುತ್ತಾರೆ. ಉಪಾಧ್ಯಕ್ಷ ಜಂಬಣ್ಣ, ನಾನು ಸಾವಿರ ರೂ. ಡೀಸೆಲ್ ಹಾಕಿಸಿ ಸ್ವಚ್ಛತೆಗೆ ಮುಂದಾಗಿರುವೆ ಅಂತ ಹೇಳುತ್ತಾರೆ. ಲಕ್ಷಾಂತರ ರೂ. ಖರ್ಚು ಮಾಡಿ ಜೆಸಿಬಿ ತಂದಿರುವುದು ಅದನ್ನು ನಿಲ್ಲಿಸಿ ಪೂಜೆ ಮಾಡಲಿಕ್ಕೆ ಎಂದು ಪ್ರಶ್ನಿಸಿದರು. ಸದಸ್ಯರಾದ ದಾದಾ ಖಲಂದರ್, ಎಸ್.ಎಂ. ವಸಂತ್, ರತ್ನ ಉಜ್ಜೇಶ್, ನಿಂಬಕ್ಕ ಚಂದಪೂರ್ ಸಮಸ್ಯೆಗಳ ಕುರಿತು ಮಾತನಾಡಿದರು.

ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಮಾತನಾಡಿ, ಶಾಲೆ, ದೇವಸ್ಥಾನ, ಮಸೀದಿ, ಚರ್ಚ್‌ಗಳಿಗೆ ಉಚಿತ ನೀರು ಸರಬರಾಜು ಮಾಡುವಲ್ಲಿ, ಮುಂದಿನ ಸಭೆಯಲ್ಲಿ ವಿಷಯ ಚರ್ಚೆಗೆ ತಂದು ಅನುಮೋದನೆ ಪಡೆದ ಮೇಲೆ ಕ್ರಮವಹಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಜಂಬಣ್ಣ ಗುತ್ತೂರು, ಸದಸ್ಯರಾದ ಕೆ.ಜಿ. ಸಿದ್ದೇಶ್, ದಿನೇಶ್ ಬಾಬು, ಬಿ.ಅಲ್ತಾಫ್, ಅಶ್ವಿನಿ ಕೃಷ್ಣ, ಪಕ್ಕೀರಮ್ಮ, ಉಷಾ ಮಂಜುನಾಥ್, ಶಹಜಾದ್ ಸನಾವುಲ್ಲಾ, ಎಂ.ಆರ್. ಮುಜಾಮಿಲ್ ಬಿಲ್ಲು, ವಿರುಪಾಕ್ಷಪ್ಪ, ಅಬ್ದುಲ್ ಅಲಿಂ, ಲಕ್ಷ್ಮೀ ಮೋಹನ್ ದುರುಗೋಜಿ, ಸುಮಿತ್ರಾ, ಹನುಮಂತಪ್ಪ, ಕೆ.ಬಿ. ರಾಜಶೇಖರ, ಜೋಸೆಫ್ ದಿವಾಕರ್, ಸಂತೋಷ ದೊಡ್ಡಮನಿ, ಇಸ್ಮಾಯಿಲ್, ರಿಜ್ವಾನ್ ಉಲ್ಲಾ ಮತ್ತು ಅಧಿಕಾರಿಗಳು ಹಾಜರಿದ್ದರು.

**ಅಧ್ಯಕ್ಷರ ಆಕ್ರೋಶ:** ನಗರಸಭೆ ಅಧ್ಯಕ್ಷೆಯಾಗಿ ಒಂದೂವರೆ ತಿಂಗಳು ಕಳೆದರೂ ಯಾವುದೇ ವಿಚಾರಕ್ಕೆ ಸಂಬಂಧಿಸಿದಂತೆ ಪೌರಾಯುಕ್ತರು ನನ್ನ ಬಳಿ ಬಂದು ಒಂದು ದಿನವೂ ಕೂಡ ಚರ್ಚೆ ಮಾಡಿರುವುದಿಲ್ಲ. ಅಲ್ಲದೇ ಸದಸ್ಯರಿಗೆ ಗೌರವವನ್ನೂ ನೀಡುತ್ತಿಲ್ಲ ಎಂದು ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ ಆಕ್ರೋಶ ವ್ಯಕ್ತಪಡಿಸಿದರು.

ಜನ ನಮ್ಮನ್ನು ನಂಬಿ ಮತ ಹಾಕಿ ಗೆಲ್ಲಿಸಿರುತ್ತಾರೆ. ಅಧಿಕಾರಿ ಮತ್ತು ಸಿಬ್ಬಂದಿ ನಿಷ್ಕ್ರಿಯತೆಯಿಂದ ವರ್ತಿಸುವುದಕ್ಕೆ ಮುಂದಾದರೆ ಜನರು ತಕ್ಕ ಉತ್ತರ ನೀಡುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



## ನವರಾತ್ರಿ ಉತ್ಸವ....

# ಕಾಳರಾತ್ರಿ ದೇವಿ- ಒಂದು ಚಿಂತನೆ

**ನವ ದುರ್ಗೆಯರ ಏಳನೇ ರೂಪ**

**ಕರಾಲವದನಾಂ ಘೋರಾಂ ಮುಕ್ತಕೇಶೀಂ ಚತುರ್ಭುಜಾಮ್ 'ಕಾಲರಾತ್ರಿಂ ಕರಾಲೀಂ ಚ ವಿದ್ಯುನ್ಮಾಮಾಲಾ ವಿಭೂಷಿತಾಮ್'**

ಈ ಧ್ಯಾನ ಶ್ಲೋಕದ ಅರ್ಥ ಕಪ್ಪು ಬಣ್ಣದಿಂದ ಕೂಡಿದ ದೇವತೆಯಾದ ಕಾಳರಾತ್ರಿ ದೇವಿಯೇ ನೀನು ಬಿಟ್ಟ ಕೂದಲಿನಿಂದ, ನಾಲ್ಕು ಕೈಗಳಿಂದ ಕೂಡಿದ್ದು ದಿವ್ಯವಾದ ಹಾರವನ್ನು ಧರಿಸಿದ್ದೀಯೆ ನಿನಗೆ ನನ್ನ ನಮಸ್ಕಾರಗಳು ಎಂಬುದಾಗಿದೆ.

ಅತ್ಯಂತ ಘೋರವಾದ ರಾಕ್ಷಸರನ್ನು ಸಂಹಾರ ಮಾಡಲು ದೇವಿಯು ಅತ್ಯಂತ ಘೋರವಾದ ಕಾಳರಾತ್ರಿ ರೂಪವನ್ನು ಧಾರಣೆ ಮಾಡುತ್ತಾಳೆ.

ಕಾಲ ಎಂದರೆ ಸಮಯ, ಎಂದರೆ ಎಲ್ಲವನ್ನು ನಾಶ ಮಾಡಲು ಶಕ್ತನಾಗಿರುವ ಸರ್ವ ಶಕ್ತ. ಲಯ ಮಾಡುವ ಲಯಕರ್ತ. ಅವನು ಶಿವನಾದರೆ, ಅವನ ಪತ್ನಿಯು ಕಾಳಿ.

ಕಪ್ಪು ಬಣ್ಣವು ಅಂಧಕಾರ, ಅಜ್ಞಾನ, ಭಯ ಎಲ್ಲದಕ್ಕೂ ಪ್ರತೀಕವಾಗಿದೆ. ಇಂತಹ ಕಪ್ಪು ಬಣ್ಣದಲ್ಲಿ ಇರುವಂತಹ ಕಾಳರಾತ್ರಿ ದೇವಿಯು ಎಲ್ಲಾ ವಿನಾಶಕಾರಿ ಸಮಯದ ರಾತ್ರಿಯ ವ್ಯಕ್ತಿತ್ವವಾಗಿದೆ.ಈ ರೂಪವು ಪ್ರಾಥಮಿಕವಾಗಿ ಜೀವನವು ಒಂದು ಕರಾಳ ಭಾಗವನ್ನು ಹೊಂದಿದೆ ಎಂದು ಚಿತ್ರಿಸುತ್ತದೆ.

ದೇವಿಯ ಈ ರೂಪವು ಎಲ್ಲಾ ರಾಕ್ಷಸ ಘಟಕಗಳು, ಪ್ರೇತಗಳು, ದುಷ್ಟ ಶಕ್ತಿಗಳು ಮತ್ತು ನಕಾರಾತ್ಮಕ ಶಕ್ತಿಗಳ ನಾಶಕ ಎಂದು ನಂಬಲಾಗಿದೆ. ಅವರು ಅವಳ ಆಗಮನದ ಬಗ್ಗೆ ತಿಳಿದ ನಂತರ ಪಲಾಯನ ಮಾಡುತ್ತಾರೆ.

ಯೋಗಿಕ ಸಾಧಕರು ಈ ದೇವಿಯನ್ನು ಸಹಸ್ರಾರ ಚಕ್ರದಲ್ಲಿ ಧ್ಯಾನ ಮಾಡುತ್ತಾರೆ. ಈ ದೇವಿಯು ಅಷ್ಟಸಿದ್ದಿಗಳು ಮತ್ತು ನವನಿಧಿಗಳನ್ನು ನೀಡುತ್ತಾಳೆ ಎಂಬ ನಂಬಿಕೆ ಇದೆ

ನವರಾತ್ರಿಯ ಏಳನೇಯ ದಿನ ಪೂಜಿಸುವ ಕಾಳರಾತ್ರಿ ದೇವಿಯು ಕತ್ತೆಯ ಮೇಲೆ ಆಸೀನಳಾಗಿದ್ದು, ನಾಲ್ಕು ಕೈಗಳಿಂದ ಕೂಡಿದ್ದಾಳೆ. ಬಲಗಡೆಯ ಎರಡು ಕೈಗಳಲ್ಲಿ ಆಶೀರ್ವದಿಸುವ ಅಭಯ ಮುದ್ರೆ ಮತ್ತು ವರದ ಮುದ್ರೆಗಳನ್ನು ತೋರಿಸುತ್ತಾಳೆ. ಎಡಗಡೆಯ ಕೈಗಳಲ್ಲಿ ಖಡ್ಗ ಮತ್ತು ಕಬ್ಬಿಣದ ಮುಳ್ಳುಗಳಿರುವ ಆಯುಧ ಹಿಡಿದಿದ್ದಾಳೆ, ಕೆಂಪಾದ ಮೂರು ಕಣ್ಣುಗಳಿಂದ ,ಬಿಚ್ಚಿದ ಕೂದಲಿಂದ ಭಯಾನಕವಾಗಿದ್ದಾಳೆ. ಕೊರಳಲ್ಲಿ ರುಂಡ ಮಾಲೆ, ಬಾಯಲ್ಲಿ ಉರಿಯುವ ಬೆಂಕಿ ಇರುವ ತಾಯಿ ಶುಭವನ್ನೇ ಮಾಡುವುದರಿಂದ ಅವಳನ್ನು ಶುಭಂಕರಿ ಎಂದು ಕರೆಯುತ್ತಾರೆ.

ಅನೇಕ ಪುರಾಣಗಳಲ್ಲಿ ಕಾಳರಾತ್ರಿ ದೇವಿಯ ಕಥೆಗಳು ಬರುತ್ತವೆ.. ಅದರಲ್ಲಿ ಮುಖ್ಯವಾಗಿ ದೇವಿ ಭಾಗವತದಲ್ಲಿ, ರಕ್ತ ಬೀಜನನ್ನು ಚಾಮುಂಡೇಶ್ವರಿ ರೂಪದ ದೇವಿಯು ಸಂಹಾರ ಮಾಡುವಾಗ, ಅವನ ದೇಹದಿಂದ ಬಿದ್ದ ರಕ್ತದಿಂದ ಅನೇಕ ಅವನಂತೆ ಇರುವ ರಾಕ್ಷಸರು ಹುಟ್ಟುತ್ತಿರುತ್ತಾರೆ. ಆಗ ಕಾಳಿಕಾ ದೇವಿಯು ರಕ್ತದ ಒಂದು ಹನಿಯೂ ನೆಲದ ಮೇಲೆ ಬೀಳದಂತೆ, ರಕ್ತ ಬೀಜಾಸುರನ ರಕ್ತವನ್ನು ಪಾನ ಮಾಡುತ್ತಾಳೆ. ಎಂಬ ಕಥೆ ಇದೆ.

ಅವಳು ಜೀವರಾಶಿಗಳು ನಿದ್ರಿಸುವಾಗ ಅವರ ಆಯಾಸ ವನ್ನು ಪರಿಹರಿಸುತ್ತಾಳೆ, ಕಡೆಯ ಸಮಯದಲ್ಲಿ ಅವರಿಗೆ ತನ್ನ ಮಡಿಲ ಆಶ್ರಯ ವನ್ನು ನೀಡುತ್ತಾಳೆ, ಪ್ರಳಯ ಕಾಲದಲ್ಲಿ ಸಮಯ ವನ್ನೇ ತಿನ್ನುತ್ತಾಳೆ. ಆಗ ಅವಳು ಮಹಾರಾತ್ರಿ ಯಾಗುತ್ತಾಳೆ. ಭ್ರಮೆ ಮೋಹಗಳನ್ನು ತಿನ್ನುವುದ ರಿಂದ ಅವಳು ಮೋಹ ರಾತ್ರಿ ಎನಿಸುತ್ತಾಳೆ.

ಇವಳ ಆರಾಧನೆಯು ಶನಿ ಗ್ರಹದ ತೊಂದರೆಗಳನ್ನು ದೂರ ಮಾಡುತ್ತದೆ.

ಇನ್ನೊಂದು ಕಥೆಯ ಪ್ರಕಾರ, ಕಾಳರಾತ್ರಿ ದುರ್ಗಾಸುರನಿಗೆ, ಪಾರ್ವತಿ ದೇವಿಯ ತಂಟೆಗೆ ಬರದಂತೆ ಎಚ್ಚರಿಕೆ ನೀಡಲು ದೂತಳಾಗಿ ಬರುತ್ತಾಳೆ. ಅವಳನ್ನು ಸೆರೆ ಹಿಡಿಯಲು ರಾಕ್ಷಸ ಪ್ರಯತ್ನಿಸಿದಾಗ ಅವಳು ಘೋರ ರೂಪವನ್ನು ತಾಳಿ ರಾಕ್ಷಸರನ್ನು ಹೆದರಿಸುತ್ತಾಳೆ.

ಅನೇಕ ಪುರಾಣಗಳಲ್ಲಿ ಕಾಲ ರಾತ್ರಿ ದೇವಿಯ ಉಲ್ಲೇಖ ಬರುತ್ತದೆ. ಮಹಾಭಾರತ, ವಾಮನ ಪುರಾಣ, ದೇವಿ ಭಾಗವತ, ಸ್ಕಂದ ಪುರಾಣ ಮತ್ತು ಮಾರ್ಕಂಡೇಯ ಪುರಾಣ ದಲ್ಲಿ, ಕಾಳರಾತ್ರಿಯ ವಿವರಣೆ ಕಾಣಬಹುದು.

ಅತ್ಯಂತ ಘೋರವಾದ ಹಿರಣ್ಯಕಶ್ಯಪು ರಾಕ್ಷಸನನ್ನು ಸಂಹಾರ ಮಾಡಲು, ನಾರಾಯಣನು ಅತ್ಯಂತ ಘೋರವಾದ ನರಸಿಂಹ ರೂಪವನ್ನು ಧರಿಸುತ್ತಾನೆ. ಆ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ.

**- ಡಾ. ರೂಪಶ್ರೀ ಶಶಿಕಾಂತ್**, ದಾವಣಗೆರೆ.

## ಮಿಥುನ್‌ಗೆ ಫಾಲ್ಕೆ ಪ್ರಶಸ್ತಿ ಪ್ರದಾನ

ನವದೆಹಲಿ, ಅ.8 - ಹಿರಿಯ ನಟ ಮಿಥುನ್ ಚಕ್ರವರ್ತಿ ಅವರಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಇದು ಚಲನಚಿತ್ರ ರಂಗಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ನೀಡುವ ಅತ್ಯುನ್ನತ ಪ್ರಶಸ್ತಿಯಾಗಿದೆ.



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ವಿಜ್ಞಾನ ಭವನದಲ್ಲಿ ಆಯೋಜಿಸಲಾಗಿದ್ದ 70ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಪ್ರಶಸ್ತಿ ನೀಡಿದರು.

1976ರಲ್ಲಿ ಮೃಣಾಲ್ ಸೇನ್ ಅವರ 'ಮೃಗಯಾ' ಚಿತ್ರದ ಮೂಲಕ ಮಿಥುನ್ ಚಿತ್ರರಂಗಕ್ಕೆ ಕಾಲಿಟ್ಟಿದ್ದರು. ಈ ಚಿತ್ರಕ್ಕಾಗಿ ಅವರಿಗೆ ಮೊದಲ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ದೊರೆತಿತ್ತು. 1992ರಲ್ಲಿ 'ತಹದೇರ್ ಕಥ' ಹಾಗೂ 1998ರಲ್ಲಿ 'ಸ್ವಾಮಿ ವಿವೇಕಾನಂದ' ಚಿತ್ರಗಳಿಗಾಗಿ ಅವರು ರಾಷ್ಟ್ರೀಯ ಪ್ರಶಸ್ತಿ ಗಳಿಸಿದ್ದರು.

## ಇಂದು ಬನಶಂಕರಿ ದೇವಿ ಅಲಂಕಾರ

ದಾವಣಗೆರೆಯ ಆಂಜನೇಯ ಬಡಾವಣೆ ಬಿಐಇಟಿ ಕಾಲೇಜು ವಿದ್ಯಾರ್ಥಿ ನಿಲಯದ ಕಾಂಪೌಂಡ್ ಬಳಿ ಇರುವ ಶ್ರೀ ಬನ್ನಿಮಹಾಂಕಾಳಿ ದೇವಿಯ 11 ನೇ ವರ್ಷದ ಶರನ್ನವರಾತ್ರಿ ಪೂಜಾ ಮಹೋತ್ಸವದ ಅಂಗವಾಗಿ ಇಂದು ಶ್ರೀ ಬಾದಾಮಿ ಬನಶಂಕರಿ ದೇವಿ ಅಲಂಕಾರ ಮಾಡಲಾಗುವುದು.

# ಧೂಮಕೇತು ಅಪಶಕುನವಲ್ಲ

## ಬಾಹ್ಯಾಕಾಶ ಕೌತುಕಗಳ ಜಾಗೃತಿ ಅಗತ್ಯ: ಖಗೋಳ ತಜ್ಞ ಶರಣಪ್ಪ



**ಎ.ವಿ. ಕಮಲಮ್ಮ ಕಾಲೇಜಿನಲ್ಲಿ 'ಆಕಾಶ ಕೌತುಕ' ಕಾರ್ಯಕ್ರಮ**

ದಾವಣಗೆರೆ, ಅ.8- ಬಹುತೇಕರು ಗ್ರಹಣದ ಸಮಯದಲ್ಲಿ ಮೌಢ್ಯಾಚರಣೆ ಗಳಿಗೆ ಒಳಗಾಗುತ್ತಿದ್ದು, ಬಾಹ್ಯಾಕಾಶ ದಲ್ಲಿ ವಿಸ್ಮಯಗಳನ್ನು ವೀಕ್ಷಿಸುವ ಅದ್ಭುತ ಅವಕಾಶಗಳಿಂದ ವಂಚಿತರಾಗುತ್ತಿದ್ದೇವೆ. ಜನಸಾಮಾನ್ಯರಲ್ಲಿ ಬಾಹ್ಯಾಕಾಶ ಕೌತುಕಗಳ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಜಿಲ್ಲೆಯ ಖಗೋಳ ತಜ್ಞ ಎಂ.ಟಿ. ಶರಣಪ್ಪ ಹೇಳಿದರು.

ನಗರದ ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಜಿಲ್ಲಾ ಸಮಿತಿ, ಜಿಲ್ಲಾ ಬಾಲಭವನ ಸಮಿತಿ ಹಾಗೂ ಎವಿಕೆ ಕಾಲೇಜು ಸಹ ಯೋಗದಲ್ಲಿ ಇಂದು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ಆಕಾಶ ಕೌತುಕ' ಕುರಿತು ಉಪನ್ಯಾಸ ನೀಡಿದರು.

ಇದೇ ದಿನಾಂಕ 12 ರ ಶನಿವಾರ ಧೂಮಕೇತು ಭೂಮಿಗೆ ತುಂಬಾ ಹತ್ತಿರಕ್ಕೆ ಬರಲಿದ್ದು, ಅಂದು ಸಂಜೆ 6.46 ನಿಮಿಷದಿಂದ ಬರಿಗಣ್ಣಿನಿಂದ ನೋಡಬಹು ದಾಗಿದೆ. ಇದು ಮತ್ತೆ ಭೂಮಿಗೆ ಬರುವುದು 80 ವರ್ಷಗಳ ನಂತರ ಎಂದರು.

ಧೂಮಕೇತುವನ್ನು ಬರಿಗಣ್ಣಿನಿಂದ ನೋಡುವುದು ಅಪಶಕುನವಲ್ಲ. ಬದಲಿಗೆ ಅದೊಂದು ಕೌತುಕ. ಆದ್ದರಿಂದ ಆಕಾಶಕಾಯಗಳು, ಸೌರವ್ಯೂಹ ಮತ್ತು ಧೂಮಕೇತುಗಳ ಬಗ್ಗೆ ಪರಿಚಯ ಮಾಡಿಕೊಳ್ಳಬೇಕಾಗಿದೆ. ಮೌಢ್ಯವನ್ನು ಬಿಟ್ಟು ಧೂಮಕೇತು ನೋಡಿ ಎಂದು ಕರೆ ನೀಡಿದರು.

ಗ್ರಹಣ, ಸಂಕ್ರಮಣ ಹಾಗೂ ಅಚ್ಛಾದನೆಗಳನ್ನು ವಿವರಿಸಿದ ಅವರು, ನಮ್ಮಲ್ಲಿ ಬಹುತೇಕರು ಗ್ರಹಣದ ಸಮಯದಲ್ಲಿ ತುಂಬಾ ಮೌಢ್ಯಗಳ ಆಚರಣೆ ಮಾಡು ತ್ತೇವೆ. ಆದರೆ ಗ್ರಹಣಗಳು ಬಾಹ್ಯಾಕಾಶದಲ್ಲಿ ನಡೆಯುವ ಸಾಮಾನ್ಯ ಚಟುವಟಿಕೆಗಳು ಎಂದು ತಿಳಿಸಿದರು.

ಕೆಲವು ಜ್ಯೋತಿಷಿಗಳು ಮೌಢ್ಯವನ್ನೇ ಬಂಡವಾಳವನ್ನಾಗಿಸಿಕೊಂಡು ಇಲ್ಲಸಲ್ಲದ ಆಚರಣೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಆದರೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ದಾವಣಗೆರೆ ಜಿಲ್ಲಾ ಘಟಕ ಗ್ರಹಣದ ಸಮಯದಲ್ಲಿಯೇ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಾ ಬರುತ್ತಿರುವುದರಿಂದ ಜಿಲ್ಲೆಯಲ್ಲಿ ಮೌಢ್ಯಗಳ ಹಾಗೂ ಮೌಢ್ಯ ಬಿತ್ತುವವರ ಕುರಿತು ಜನಸಾಮಾನ್ಯರು ಜಾಗೃತರಾಗಿದ್ದಾರೆ ಎಂದರು.

ಬಾಹ್ಯಾಕಾಶದಲ್ಲಿ ನಡೆಯುವ ಕೌತುಕಭರಿತ ಕಾರ್ಯಕ್ರಮಗಳನ್ನು ಜನಸಾಮಾನ್ಯರಿಗೆ ತಲುಪಿಸು ವಂತಹ ಕಾರ್ಯಕ್ರಮಗಳು ಕಡಿಮೆಯಾಗಿವೆ. ಆದ್ದರಿಂದಲೇ ಬಹುತೇಕರು ಬಾಹ್ಯಾಕಾಶ ವಿಸ್ಮಯಗಳನ್ನು ವೀಕ್ಷಿಸುವ ಅದ್ಭುತ ಅವಕಾಶಗಳಿಂದ ವಂಚಿತರಾಗಿದ್ದಾರೆಂದರು.

ಇದೇ ದಿನಾಂಕ 14 ರಂದು ಆಕಾಶದಲ್ಲಿ ಶನಿಗ್ರಹ ಕಾಣಲಿದ್ದು, ಅದರೊಂದಿಗೆ ಚಂದ್ರನ ಪಕ್ಕದಲ್ಲಿರುವ ಗ್ರಹವೊಂದು ಶನಿ ಗ್ರಹವನ್ನು ಹಿಂದಿನಿಂದ ಸುತ್ತಿ ಹೊರಗೆ ಬರಲಿದೆ. ಇದರೊಂದಿಗೆ ಧೂಮಕೇತು ಸಹ ಗೋಚರಿಸಲಿದ್ದು, ಈ ತಿಂಗಳಲ್ಲಿ ಮೂರು ಕೌತುಕಗಳು ಆಕಾಶದಲ್ಲಿ ನಡೆಯಲಿವೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ದಾವಣಗೆರೆ ಜಿಲ್ಲಾ ಘಟಕದ ಗೌರವಾಧ್ಯಕ್ಷ ಡಾ.ಜೆ.ಬಿ. ರಾಜು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಜಗತ್ತಿನಲ್ಲಿ ನಡೆಯುವ ಕೌತುಕಗಳನ್ನು ನೋಡುವ ಅವಕಾಶಗಳಿಂದ ಯಾರೂ ಕೂಡ ವಂಚಿತರಾಗಬಾರದು ಎಂದು ಸಲಹೆ ನೀಡಿದರು.

ಇಂದಿನ ವಿದ್ಯಾವಂತ ಜನರಲ್ಲಿಯೇ ಅತಿಹೆಚ್ಚು ಮೌಢ್ಯಗಳ ಆಚರಣೆಗಳನ್ನು ಕಾಣುತ್ತೇವೆ. ಬೆಕ್ಕು ದಾರಿಗೆ ಅಡ್ಡ ಬಂದರೆ ಸ್ವಲ್ಪ ಸಮಯ ನಿಂತು ಮುಂದೆ ಸಾಗುತ್ತೇವೆ. ಇಂತಹ ಮೌಢ್ಯಗಳಿಂದ ದೂರ ಇರುವ ಮೂಲಕ ವೈಜ್ಞಾನಿಕ ಮನೋಭಾವನೆ ಬೆಳೆಸಿಕೊಂಡು ಇತರರಿಗೆ ಮಾದರಿಯಾಗಬೇಕಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರ್ಯ ಕ್ರಮ ನಿರೂಪಣಾಧಿಕಾರಿ ಗುರುಪ್ರಸಾದ್ ಮಾತನಾಡಿ, ನಾವು ನಿತ್ಯ ಆಕಾಶ ನೋಡುತ್ತೇವೆ. ಆದರೆ ಕೌತುಕಭರಿತ ಅಂಶಗಳ ಕುರಿತು ಯೋಚಿಸುವುದು ಕಡಿಮೆ. ಆಗಸ ಎಷ್ಟು ವಿಶಾಲವಾಗಿದೆಯೋ ಅಷ್ಟೇ ಕೌತುಕವಾಗಿದೆ. ಅದನ್ನು ನೋಡುವ ನಮ್ಮ ಒಳದೃಷ್ಟಿ ಕುತೂಹಲಭರಿತ ವಾಗಿರಬೇಕು. ಆಗ ಮಾತ್ರ ನಿತ್ಯ ಹೊಸ ವಿದ್ಯಮಾನಗಳನ್ನು ಗುರುತಿಸಬಹುದಾಗಿದೆ ಎಂದು ಹೇಳಿದರು.

ಎ.ವಿ. ಕಮಲಮ್ಮ ಕಾಲೇಜಿನ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಶಿವಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳು ಈ ತಿಂಗಳ ಎಲ್ಲಾ ಬಾಹ್ಯಾಕಾಶ ಕೌತುಕಗಳನ್ನು ವೀಕ್ಷಿಸಿ ವರದಿ ತಯಾರಿಸಲು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕರಾವಿಪ ಕಾರ್ಯದರ್ಶಿ ಎಂ. ಗುರುಸಿದ್ದಸ್ವಾಮಿ, ಕರಾವಿಪ ಜಿಲ್ಲಾ ಸಮಿತಿ ಸದಸ್ಯರಾದ ಸಿದ್ದೇಶ್ ಕತ್ತಲಗೆರೆ, ಎಂ.ನಾಗರಾಜ್ ಕಕ್ಕರಗೊಳ್ಳ, ಬಾಲಭವನದ ಸಂಯೋಜಕಿ ಶಿಲ್ಪ ಮತ್ತಿತರರು ಭಾಗವಹಿಸಿದ್ದರು.

# ದಸರಾ ಹಬ್ಬದ ಸಂದರ್ಭದಲ್ಲಿ ವಿಶೇಷ ರೈಲು ಸೇವೆ ಆರಂಭ

ದಸರಾ ಹಬ್ಬದ ಸಮಯದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ಸರಿದೂಗಿಸಲು ಕಾಯ್ದಿರಿಸಿದ ಮತ್ತು ಕಾಯ್ದಿರಿಸದ ವಿಶೇಷ ರೈಲುಗಳನ್ನು ಓಡಿಸಲು ನೈಋತ್ಯ ರೈಲ್ವೆ ನಿರ್ಧರಿಸಿದೆ. ಅವುಗಳ ಮಾಹಿತಿ ಈ ಕೆಳಗಿನಂತಿದೆ:

**ರೈಲು ಸಂಖ್ಯೆ 07305/07306 ಎಸ್‌ಎಸ್‌ಎಸ್ ಹುಬ್ಬಳ್ಳಿ-ಯಶವಂತಪುರ-ಬೆಳಗಾವಿ ವಿಶೇಷ ಎಕ್ಸ್‌ಪ್ರೆಸ್ ರೈಲು:**

ರೈಲು ಸಂಖ್ಯೆ 07305 ಎಸ್‌ಎಸ್‌ಎಸ್ ಹುಬ್ಬಳ್ಳಿ-ಯಶವಂತಪುರ ವಿಶೇಷ ಎಕ್ಸ್ ಪ್ರೆಸ್ ರೈಲು ಅಕ್ಟೋಬರ್ 10, 2024 ರಂದು ಎಸ್‌ಎಸ್‌ಎಸ್ ಹುಬ್ಬಳ್ಳಿಯಿಂದ 11:30 ಗಂಟೆಗೆ ಹೊರಟು, ಅದೇ ದಿನ ಯಶವಂತಪುರ 19:40 ಗಂಟೆಗೆ ತಲುಪಲಿದೆ.

ಈ ರೈಲು ಹಾವೇರಿ, ರಾಣೇಬೆನ್ನೂರು, ಹರಿಹರ, ದಾವಣಗೆರೆ, ಬೀರೂರು, ಅರಸೀಕೆರೆ, ತಿಪಟೂರು ಮತ್ತು ತುಮಕೂರು ನಿಲ್ದಾಣಗಳಲ್ಲಿ ನಿಲುಗಡೆ ಇರಲಿದೆ.



ರೈಲು ಸಂಖ್ಯೆ 07306 ಯಶವಂತಪುರ-ಬೆಳಗಾವಿ ವಿಶೇಷ ಎಕ್ಸ್‌ಪ್ರೆಸ್ ರೈಲು ಅಕ್ಟೋಬರ್ 10, 2024 ರಂದು ಯಶವಂತಪುರದಿಂದ 20:55 ಗಂಟೆಗೆ ಹೊರಟು, ಮರುದಿನ ಬೆಳಗಾವಿಗೆ 08:15 ಗಂಟೆಗೆ ತಲುಪಲಿದೆ.

ಈ ರೈಲು ತುಮಕೂರು, ತಿಪಟೂರು, ಅರಸೀಕೆರೆ, ಬೀರೂರು, ದಾವಣಗೆರೆ, ಹರಿಹರ, ರಾಣೇಬೆನ್ನೂರು, ಹಾವೇರಿ, ಎಸ್‌ಎಸ್‌ಎಸ್ ಹುಬ್ಬಳ್ಳಿ, ಧಾರವಾಡ, ಅಳ್ನಾವರ, ಲೋಂಡಾ ಮತ್ತು ಖಾನಾಪುರ ನಿಲ್ದಾಣಗಳಲ್ಲಿ ನಿಲುಗಡೆ ಇರಲಿದೆ.

**ರೈಲು ಸಂಖ್ಯೆ 07307/07308 ಬೆಳಗಾವಿ-ಮೈಸೂರು-ಎಸ್‌ಎಸ್‌ಎಸ್ ಹುಬ್ಬಳ್ಳಿ ವಿಶೇಷ ಎಕ್ಸ್‌ಪ್ರೆಸ್ ರೈಲು:**

ರೈಲು ಸಂಖ್ಯೆ 07307 ಬೆಳಗಾವಿ-ಮೈಸೂರು ವಿಶೇಷ ಎಕ್ಸ್‌ಪ್ರೆಸ್ ರೈಲು ಅಕ್ಟೋಬರ್ 11, 2024 ರಂದು ಬೆಳಗಾವಿಯಿಂದ 17:30 ಗಂಟೆಗೆ ಹೊರಟು, ಮರುದಿನ ಮೈಸೂರಿಗೆ 06:25 ಗಂಟೆಗೆ ತಲುಪಲಿದೆ.

ಈ ರೈಲು ಖಾನಾಪುರ, ಲೋಂಡಾ, ಅಳ್ನಾವರ, ಧಾರವಾಡ, ಎಸ್‌ಎಸ್‌ಎಸ್ ಹುಬ್ಬಳ್ಳಿ, ಹಾವೇರಿ, ರಾಣೇಬೆನ್ನೂರು, ಹರಿಹರ, ದಾವಣಗೆರೆ, ಬೀರೂರು, ಅರಸೀಕೆರೆ, ಹಾಸನ, ಹೊಳೆ ನರಸೀಪುರ ಮತ್ತು ಕೃಷ್ಣರಾಜನಗರ ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ.

ರೈಲು ಸಂಖ್ಯೆ 07308 ಮೈಸೂರು-ಎಸ್‌ಎಸ್‌ಎಸ್ ಹುಬ್ಬಳ್ಳಿ ವಿಶೇಷ ಎಕ್ಸ್‌ಪ್ರೆಸ್ ರೈಲು ಅಕ್ಟೋಬರ್ 12, 2024 ರಂದು ಮೈಸೂರಿನಿಂದ 22:30 ಗಂಟೆಗೆ ಹೊರಟು, ಮರುದಿನ ಎಸ್‌ಎಸ್‌ಎಸ್ ಹುಬ್ಬಳ್ಳಿಗೆ 07:00 ಗಂಟೆಗೆ ತಲುಪಲಿದೆ.

ಈ ರೈಲು ಕೃಷ್ಣರಾಜನಗರ, ಹೊಳೆ ನರಸೀಪುರ, ಹಾಸನ, ಅರಸೀಕೆರೆ, ಬೀರೂರು, ದಾವಣಗೆರೆ, ಹರಿಹರ, ರಾಣೇಬೆನ್ನೂರು ಮತ್ತು ಹಾವೇರಿ ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ.

ಈ ವಿಶೇಷ ರೈಲುಗಳು (07305/06 ಮತ್ತು 07307/08) 1 ಎಸಿ 2-ಟೈಯರ್, 1 ಎಸಿ 3-ಟೈಯರ್, 10 ಸ್ಲೀಪರ್ ಕ್ಲಾಸ್, 2 ಸಾಮಾನ್ಯ ದ್ವಿತೀಯ ದರ್ಜೆ ಮತ್ತು 2 ಎಸ್‌ಎಲ್‌ಆರ್/ಡಿ ಬೋಗಿಗಳು ಸೇರಿದಂತೆ 16 ಬೋಗಿಗಳನ್ನು ಒಳಗೊಂಡಿರುತ್ತವೆ.

ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ನಮ್ಮ ಸಹಾಯವಾಣಿ ಸಂಖ್ಯೆ 139ಗೆ ಸಂಪರ್ಕಿಸಿ ಅಥವಾ ವೆಬ್ ಸೈಟ್ www.enquiry.indianrail.gov.in.ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಬಹುದು.

# ತಾನೇ ಕದ್ದು ಸುಳ್ಳು ದೂರು ದಾಖಲಿಸಿದ ಮಹಿಳೆ ಬಂಧನ !

ದಾವಣಗೆರೆ, ಅ.8- ತನ್ನ ಮನೆಯಲ್ಲೇ ಕಳ್ಳತನ ಮಾಡಿ ಯಾರೋ ಅಪರಿಚಿತರು ಪ್ರಜ್ಞೆ ತಪ್ಪಿಸಿ ನಗದು, ಚಿನ್ನಾಭರಣ ಕದ್ದೊಯ್ದಿದ್ದಾರೆ ಎಂದು ಕಳ್ಳತನದ ಕಥೆ ಸೃಷ್ಟಿಸಿ ದೂರು ನೀಡಿದ್ದ ಯುವತಿ ಹಾಗೂ ಕಳ್ಳತನಕ್ಕೆ ಸಹಕರಿಸಿದ್ದವನನ್ನು ಬಂಧಿಸಿರುವ ಚನ್ನಗಿರಿ ಪೊಲೀಸರು 1.27 ಲಕ್ಷ ರೂ. ನಗದು, 9.5 ಲಕ್ಷ ರೂ. ಬೆಲೆಯ 155 ಗ್ರಾಂ ಬಂಗಾರದ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.


ಕಳ್ಳತನದ ಕಥೆ ಸೃಷ್ಟಿಸಿದ್ದ ಚನ್ನಗಿರಿ ತಾಲ್ಲೂಕಿನ ಅಗರಬನ್ನಿಹಟ್ಟಿ ಗ್ರಾಮದ ತಸ್ಮೀಯಖಾನಂ (26), ಹಾಗೂ ಅವರ ಕುಟುಂಬದ ನಿಕಟವರ್ತಿ ಬೆಂಗಳೂರಿನ ರಾಜಾಜಿನಗರ ನಿವಾಸಿ ಮುಜೀಬುಲ್ಲಾ ಶೇಖ್ ಅಲಿಯಾಸ್ ಜಾಕೀರ್ (42) ಬಂಧಿತರು.


ಚನ್ನಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಅಗರಬನ್ನಿಹಟ್ಟಿ ಗ್ರಾಮದ ಅಮಾನುಲ್ಲಾ ಎಂಬುವವರ ಮಗಳು ತಸ್ಮೀಯ ಖಾನಂ ಸೆ.3 0 ರಂದು ತಾನು ಮನೆಯಲ್ಲಿ ಒಬ್ಬಳೇ ಇದ್ದ ಸಮಯದಲ್ಲಿ ಯಾರೋ ಒಬ್ಬ ವ್ಯಕ್ತಿ ಮನೆಯೊಳಗೆ ಬಂದು ಮುಖಕ್ಕೆ ಬಾಯಿಂದ ಊದಿ, ನಂತರ ನೀರಿನಂತಹ ದ್ರವ ಚಿಮುಕಿಸಿದ್ದರಿಂದ ಪ್ರಜ್ಞೆ ತಪ್ಪಿದಂತಾಗಿದ್ದು, ಕುಟುಂಬದವರು ಬಂದು ಎಬ್ಬಿಸಿದ ನಂತರ ನೋಡಿದಾಗ ಮನೆಯ ಬೀರುವಿನ ಬೀಗ ಮುರಿದು 17 ತೊಲ ಬಂಗಾರದ ಒಡವೆ ಮತ್ತು 1.20 ಲಕ್ಷ ಕಳವು ಮಾಡಿಕೊಂಡು ಹೋಗಿರುವುದಾಗಿ ಚನ್ನಗಿರಿ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು.

ಕಳ್ಳತನ ನಡೆದ ದಿನವೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್ ಆರೋಪಿಗಳ ಪತ್ತೆಗೆ ಸೂಕ್ತ ನಿರ್ದೇಶನ ನೀಡಿದ್ದರು. ಪೊಲೀಸರು ತನಿಖೆ ನಡೆಸಿದಾಗ ಕಳ್ಳತನದ ದೂರು ನೀಡಿದ್ದಂತ ಸ್ವತಃ ತಸ್ಮೀಯ ಖಾನಂ ಕೃತ್ಯದಲ್ಲಿ ಭಾಗಿಯಾಗಿರುವುದು ಬೆಳಕಿಗೆ ಬಂದಿದೆ.

ಹೆಚ್ಚಿನ ವಿಚಾರಣೆ ನಡೆಸಿದಾಗ ಮುಜೀಬುಲ್ಲಾ ಶೇಖ್ ಅಲಿಯಾಸ್ ಜಾಕೀರ್ ಜೊತೆ ಸೇರಿಕೊಂಡು ಕಳ್ಳತನ ಮಾಡಿದ್ದು, ಯಾರಿಗೂ ಗೊತ್ತಾಗಬಾರದು ಎನ್ನುವ ಕಾರಣಕ್ಕೆ ಸುಳ್ಳು ಕತೆ ಸೃಷ್ಟಿಸಿರುವುದು ವಿಚಾರಣೆ ವೇಳೆ ತಿಳಿಸಿದ್ದಾರೆ. ಮುಜೀಬುಲ್ಲಾ ಮನೆಯಲ್ಲಿಟ್ಟಿದ್ದ ನಗದು ಹಾಗೂ ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ.

# ರಾಣೇಬೆನ್ನೂರು : ಕೃಷ್ಣಮೃಗ ಅಭಯಾರಣ್ಯದಲ್ಲಿ ಸಫಾರಿ ವ್ಯವಸ್ಥೆ









**ಮನೋಹರ ಮಲ್ಲಾಡದ**

ಖಾಸಗಿ ವಾಹನಗಳಲ್ಲಿ ಪರವಾನಿಗೆ ಪಡೆದು ಅರಣ್ಯದಲ್ಲಿ ಸಂಚರಿಸುತ್ತಿದ್ದ ಪ್ರಾಣಿ ಪ್ರಿಯರಿಗೆ ಇಲಾಖೆಯ ವನ್ಯಜೀವಿ ಸಂರಕ್ಷಣಾ ವಿಭಾಗ ರಾಣೇಬೆನ್ನೂರು ಕೃಷ್ಣಮೃಗ ಅಭಯಾರಣ್ಯದಲ್ಲಿ ತಮ್ಮದೇ ವಾಹನದ ಮೂಲಕ ಸಫಾರಿ ವ್ಯವಸ್ಥೆ ಮಾಡಿದ್ದು, ಇದರ ಸದುಪಯೋಗವನ್ನು ಮಾಡಿಕೊಳ್ಳುವಂತೆ ಅರಣ್ಯ ಇಲಾಖೆ ಮನವಿ ಮಾಡಿದೆ.

ಜಿಂಕೆಗಳ ಜಾತಿಗಳಲ್ಲಿ ಕೃಷ್ಣಮೃಗವು ಒಂದು ಪ್ರಭೇದ. ಗಂಡು ಮೃಗಗಳಿಗೆ ಕೃಷ್ಣಮೃಗ ವೆಂದರೆ, ಹೆಣ್ಣಿಗೆ ಚಿಗರೆಗಳೆಂದು ಕರೆಯುತ್ತಾರೆ. ಹುಟ್ಟಿದಾಗ ಗಂಡು- ಹೆಣ್ಣು ಎರಡೂ ಬಂಗಾರ ಬಣ್ಣದ್ದಾಗಿರುತ್ತವೆ. ತದನಂತರದಲ್ಲಿ ಗಂಡು, ಕಪ್ಪು ಬಣ್ಣಕ್ಕೆ ತಿರುಗುವುದರಿಂದ ಕೃಷ್ಣಮೃಗವೆಂದು ಕರೆಯಲಾಗುತ್ತದೆ. ಇವು ನಿಂತ ಸ್ಥಳದಿಂದ ಒಮ್ಮೆಲೇ ಒಂದು ಮೀಟರ್ ಎತ್ತರಕ್ಕೆ ನೆಗೆಯಬಲ್ಲವು. ವನ್ಯ ಜೀವಿಗಳ ಪೈಕಿ ಈ ಮೃಗಗಳು ಅತ್ಯಂತ ಸುಂದರ ಪ್ರಾಣಿಗಳಾಗಿದ್ದು, ಇವುಗಳ ಸೌಂದರ್ಯಕ್ಕೆ ಸೀತೆ ಮಾರು ಹೋದದ್ದೇ ರಾಮಾಯಣ.

ಕೃಷ್ಣಮೃಗ ರಕ್ಷಣೆಗೆ ಹೆಚ್ಚಿನ ಮಹತ್ವ ನೀಡುತ್ತಿರುವ ಇಲಾಖೆಯು, ಅವುಗಳ ಆಹಾರಕ್ಕೆ ಇಲ್ಲಿ ಬೆಳೆದಿರುವ ಚದರಂಗಿ ಸೇರಿದಂತೆ ಎಲ್ಲ ಮುಳ್ಳು ಕಂಟಿಗಳನ್ನು, ನೀಲಗಿರಿ ಮರಗಳನ್ನು ತೆರವು ಗೊಳಿಸಿದ್ದು, ಹುಲ್ಲುಗಾವಲು ಪ್ರದೇಶವಾಗಿಸಿದೆ. ಅರಣ್ಯದಾದ್ಯಂತ 120 ಕಡೆಗಳಲ್ಲಿ ಸಣ್ಣ, ಪುಟ್ಟ ಕೆರೆ ಕಟ್ಟೆಗಳನ್ನು ನಿರ್ಮಿಸಿ ನೀರು ಸಂಗ್ರಹಿಸಲಾಗುತ್ತಿದೆ. ಕೃಷ್ಣ ಮೃಗಗಳ ಜೊತೆಗೆ ಎರಲದ್ದು, ನವಿಲು, ಬುರಲಿ, ಕೌಜುಗ, ಕಪ್ಪಡ್ರೋಂಗೋ, ಕೋಗಿಲೆ, ಮೈನಾ, ಗಿಳಿ ಮುಂತಾದ ಪಕ್ಷಿಗಳು, ತೋಳ, ನರಿ, ಮುಳ್ಳುಹಂದಿ, ಕಾಡುಹಂದಿ, ಪೆಂಗೋಲಿನ್, ಉಡ, ಮುಂಗಸಿ, ಹಾವು, ಕೋತಿ, ಮೊಲ, ಹೈನಾ ಕತ್ತೆಕಿರುಬಗಳು ಸಹ ಇಲ್ಲಿ ಸಹಬಾಳ್ವೆ ನಡೆಸಿವೆ. ಇವುಗಳನ್ನು ಸಫಾರಿ ವಾಹನದ ಮೂಲಕ ಪ್ರಾಣಿ ಪ್ರಿಯರು ವೀಕ್ಷಿಸಿ ಆನಂದಿಸಬಹುದಾಗಿದೆ. ಕ್ಷೇತ್ರದ ಶಾಸಕ ಪ್ರಕಾಶ್ ಕೋಳಿವಾಡ ಅವರು ಈ ಸಫಾರಿ ವಾಹನಕ್ಕೆ ಅನುದಾನ ನೀಡಿರುತ್ತಾರೆ.

ರಾಣೇಬೆನ್ನೂರು ನಗರದಿಂದ 6 ಕಿಮೀ ದೂರದ ಈ ಅರಣ್ಯ, 119 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ 14.87 ಚ.ಕಿಮೀ ರಕ್ಷಿತ ವಲಯ,104 ಕಿಮೀದಷ್ಟು ಬಫರ್- ಕಮ್ ಪ್ರವಾಸೋದ್ಯಮ ವಲಯವೆಂದು ವಿಂಗಡಿಸಲಾಗಿದೆ. ಬೆಳಿಗ್ಗೆ 6 ರಿಂದ 8, ಸಂಜೆ 4 ರಿಂದ 6 ವರೆಗೆ ಪ್ರಾಣಿ ಪಕ್ಷಿಗಳು ವೀಕ್ಷಣೆಗೆ ಲಭ್ಯವಿದ್ದು, ಆ ಸಂದರ್ಭದಲ್ಲಿ ಸಫಾರಿಗೆ ಅವಕಾಶವಿದೆ. ಸಫಾರಿಗೆ ಹನ್ನೆರಡು ಜನರಿಗೆ ಸ್ಥಳಾವಕಾಶವಿರುವ ವಾಹನ ಲಭ್ಯವಿದೆ ಎನ್ನುವ ಎಲ್ಲ ಮಾಹಿತಿಯನ್ನು ಎಸಿಎಫ್ ಸತೀಶ್ ಪೂಜಾರ ವಿವರಿಸಿದರು.

**ನಮ್ಮ ಕ್ಷೇತ್ರವನ್ನು ಪ್ರವಾಸಿ ಕೇಂದ್ರವಾಗಿಸುವ**



**ಕನಸು...**

'ನಮ್ಮ ಕ್ಷೇತ್ರದಲ್ಲಿರುವ ಬೆಟ್ಟದ ಮಲ್ಲಯ್ಯ ತಾಣದ ಜೊತೆಗೆ, ಎಲ್ಲ ವೀಕ್ಷಣಾ ಸ್ಥಳಗಳನ್ನು ಅಭಿವೃದ್ಧಿಪಡಿಸಿ ಪ್ರವಾಸಿ ಕೇಂದ್ರವನ್ನಾಗಿಸುವ ಕನಸಿನೊಂದಿಗೆ ಸಫಾರಿ ವಾಹನಕ್ಕೆ ಅನುದಾನ ನೀಡಿರುವೆ'

**ಪ್ರಕಾಶ ಕೋಳಿವಾಡ,**
ಶಾಸಕರು, ರಾಣೇಬೆನ್ನೂರು.

## ನಗರದಲ್ಲಿ ಇಂದು ಗಣಹೋಮ, ದುರ್ಗಾಹೋಮ

ಚಿಕ್ಕಮ್ಮಣಿ ದೇವರಾಜ ಅರಸು ಬಡಾವಣೆಯ ಶ್ರೀ ನಾಗರಿಕ ಕ್ಷೇಮಾಭಿವೃದ್ಧಿ ಸಮಿತಿ, ಅಪ್ಪು ಅಭಿಮಾನಿ ಬಳಗ ಹಾಗೂ ಶ್ರೀ ಬನ್ನಿಮಹಾಂಕಾಳಿ ದೇವಿ ದೇವಸ್ಥಾನ ಸಮಿತಿ ವತಿಯಿಂದ 3 ನೇ ವರ್ಷದ ಶರನ್ನವರಾತ್ರಿ ಮಹೋತ್ಸವದ ಅಂಗವಾಗಿ ಸಂಜೆ 4 ಗಂಟೆಗೆ ಮಹಾಸಂಕಲ್ಪ, ಮಹಾಪೂಜೆ, ಪುಣ್ಯಾಹ ನವಗ್ರಹ ಆರಾಧನೆ, ಗಣಹೋಮ, ದುರ್ಗಾಹೋಮ, ಸಂಜೆ 6 ಗಂಟೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

# ಸಮೀಕ್ಷೆ ಹೆಸರಿನ ಗಣತಿ ವರದಿ ಅನುಷ್ಠಾನ ಬೇಡ

**(1ನೇ ಪುಟದಿಂದ)** ಸಂಘ ಆಗ್ರಹಪಡಿಸಿದೆ. ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಸಂಘ, ನೈಜ ವರದಿ ಪಡೆದು ಜಾರಿಗೆ ತರಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಂಪುಟ ಸಚಿವರುಗಳನ್ನು ಒತ್ತಾಯಿಸುತ್ತೇವೆ ಎಂದಿದೆ.

ಈ ಹಿಂದೆ ಸಮೀಕ್ಷೆ ವೇಳೆ ಬಹಳಷ್ಟು ಮನೆಗಳಿಗೆ ಭೇಟಿ ನೀಡಿಲ್ಲ ಎಂಬುದಾಗಿ ಸಹಸ್ರಾರು ಪತ್ರಗಳು ಹಾಗೂ ದೂರವಾಣಿ ಕರೆಗಳು ಒಕ್ಕಲಿಗರ ಸಂಘಕ್ಕೆ ಬಂದಿವೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಎರಡು-ಮೂರು ಬಾರಿ ಸರ್ಕಾರ ಹಾಗೂ ಹಿಂದುಳಿದ ವರ್ಗಗಳ ಆಯೋಗಕ್ಕೆ ಜಾತಿ ಗಣತಿ ಮರು ಸಮೀಕ್ಷೆ ನಡೆಸುವಂತೆ ಸಂಘ ಮನವಿ ಮಾಡಿತ್ತು.

ಇದೇ ಒತ್ತಾಯವನ್ನು ಅಖಿಲ ಭಾರತ ವೀರಶೈವ ಮಹಾಸಭಾ ಸಹ ಮಾಡಿದೆ, ಇತರೆ ಸಮುದಾಯಗಳೂ ಮನವಿ ಮಾಡಿವೆ. ಮನವಿಗಳನ್ನು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಸಚಿವರುಗಳು ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸುತ್ತೇವೆ.

ಯಾವುದೇ ಜನಾಂಗಕ್ಕೆ ಅನಾನುಕೂಲವಾಗಬಾರದು ಎಂಬುದು ನಮ್ಮ ಉದ್ದೇಶ. ಕಾಂತರಾಜು ಆಯೋಗದ ಅಧ್ಯಕ್ಷರಾಗಿದ್ದಾಗ ನಡೆಸಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ವರದಿ ಅವೈಜ್ಞಾನಿಕವಾಗಿದೆ. ಈ ವರದಿ ಹತ್ತು ವರ್ಷಗಳಷ್ಟು ಹಳೆಯ ಮಾಹಿತಿ ಒಳಗೊಂಡಿದೆ. ನಂತರದ ಬದಲಾವಣೆಗಳ ಮಾಹಿತಿ ಇಲ್ಲ, ಆದ್ದರಿಂದ ವರದಿ ಅಪ್ರಸ್ತುತ ಮತ್ತು ಅವೈಜ್ಞಾನಿಕವಾಗಿದೆ.

ಸಂಪುಟ ಸಭೆಯಲ್ಲಿ ಜಾತಿಗಣತಿ ವರದಿ ಮಂಡಿಸಿ ಚರ್ಚೆ ನಡೆಸಿ ಅನುಷ್ಠಾನಕ್ಕೆ ತರುವ ಕುರಿತು ಮಾಧ್ಯಮಗಳಲ್ಲಿ ವರದಿಯಾಗಿದ್ದು, ಅವೈಜ್ಞಾನಿಕ ವರದಿ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚಿಸುವ ಅಗತ್ಯವಿಲ್ಲ. ಕೆಲವು ಪ್ರಭಾವಿಗಳ ಹಾಗೂ ಕೆಲವು ಸಂಘಟನೆಗಳ ಒತ್ತಡಕ್ಕೆ ಸರ್ಕಾರ ಮಣಿಯಬಾರದು. ರಾಜಕೀಯ ದುರುದ್ದೇಶದಿಂದ ಜಾತಿಗಣತಿ ಅನುಷ್ಠಾನವಾಗಬಾರದು. ಸರ್ವಸಮ್ಮತ ವರದಿ ಅನುಷ್ಠಾನಗೊಳ್ಳಬೇಕು ಎಂದು ಸಂಘ ಒತ್ತಾಯಿಸಿದೆ.

ವೈಜ್ಞಾನಿಕ ವರದಿ ಪಡೆಯದೇ ಹಠಕ್ಕೆ ಬಿದ್ದು ಪ್ರಸ್ತುತ ವರದಿ ಅನುಷ್ಠಾನಕ್ಕೆ ಸರ್ಕಾರ ಮುಂದಾದರೆ ಒಕ್ಕಲಿಗರ ಸಂಘದ ನೇತೃತ್ವದದಲ್ಲಿ ಇತರೆ ಸಂಘ-ಸಂಸ್ಥೆಗಳ ಜೊತೆಗೂಡಿ ಉಗ್ರ ಹೋರಾಟ ನಡೆಸುವುದು ಅನಿವಾರ್ಯವಾಗಲಿದೆ ಎಂದು ಸಂಘ ಎಚ್ಚರಿಸಿದೆ.

# ಹರಿಯಾಣ ಸೋಲಿಗೆ ಮುಡಾ ಕಾರಣ : ಕೋಳಿವಾಡ

ಬೆಂಗಳೂರು, ಅ. 8 - ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಿಗೆ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣ ಕಾರಣ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಹಾಗೂ ಮಾಜಿ ವಿಧಾನಸಭಾಧ್ಯಕ್ಷ ಕೆ.ಬಿ. ಕೋಳಿವಾಡ ಇಂದಿಲ್ಲಿ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹರಿಯಾಣ ಚುನಾವನಾ ಪ್ರಚಾರದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು, ಸಿಎಂ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣ ಪ್ರಸ್ತಾಪಿಸಿ ಕಾಂಗ್ರೆಸ್ ವಿರುದ್ಧ ದಾಳಿ ಮಾಡುತ್ತಿದ್ದರು, ಇದರಿಂದ ಪಕ್ಷಕ್ಕೆ ಚುನಾವಣೆ ಯಲ್ಲಿ ಭಾರೀ ಹಿನ್ನಡೆಯಾಯಿತು ಎಂದರು.

ಸಿದ್ದರಾಮಯ್ಯ ವಿರುದ್ಧದ ಮುಡಾ ಆರೋಪ ಕಾಂಗ್ರೆಸ್ ಪಕ್ಷದ ಚುನಾವಣೆ ಮೇಲೆ ಪ್ರಭಾವ ಬೀರಿತು. ಪ್ರಧಾನಿ ಮೋದಿ ಮುಡಾ ಹಗರಣದ ಬಗ್ಗೆ ಪದೇ ಪದೇ ಮಾತನಾಡಿದ್ದು ಸಾಕಷ್ಟು ನಷ್ಟ ಉಂಟು ಮಾಡಿತು.



ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಮುಡಾ ಹಗರಣದ ತನಿಖೆ ಎದುರಿಸಬೇಕು ಎಂಬ ತಮ್ಮ ಈ ಮೊದಲಿನ ಹೇಳಿಕೆಗೆ ಈಗಲೂ ಬದ್ಧನಾಗಿದ್ದೇನೆ, ನನ್ನ ಹೇಳಿಕೆ ಅಳಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ನಾನು ಕಾಂಗ್ರೆಸ್ ದೃಷ್ಟಿಯಿಂದ ಆ ಮಾತನ್ನು ಹೇಳಿದ್ದೇನೆ. ಕಾಂಗ್ರೆಸ್ ಪಕ್ಷಕ್ಕೆ ಧಕ್ಕೆ ಆದರೆ ನೋಟಿಸ್ ಕೊಡುತ್ತಾರೆ. ನಾನು ಸಕ್ರಿಯ ರಾಜಕಾರಣದಲ್ಲಿ ಇಲ್ಲ, ಪಕ್ಷ ಉಳಿಸಲು ಕೆಲಸ ಮಾಡುತ್ತೇನೆ ಎಂದರು.

ಎಐಸಿಸಿ ನಾಯಕರು ಏಕೆ ನನಗೆ ಎಚ್ಚರಿಕೆ ನೀಡುತ್ತಾರೆ? ನಾನು ಕಾಂಗ್ರೆಸ್‌ನ ಹಿರಿಯ ನಾಯಕ, ನಾನು ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ನೇಹಿತರು. ನನ್ನ ಅಭಿಪ್ರಾಯ ಹೇಳಿದ್ದೇನೆ. ಸ್ವತಃ ಮಲ್ಲಿಕಾ ರ್ಜುನ ಖರ್ಗೆ ಅವರೇ ತಾವು ಪಕ್ಷದಲ್ಲಿ ಇರಬಹುದು, ಇಲ್ಲದೇ ಇರಬಹುದು, ಆದರೆ, ಪಕ್ಷ ಇದ್ದೇ ಇರುತ್ತದೆ ಎಂದಿದ್ದಾರೆ.

ಕಾಂತರಾಜ ವರದಿ ಕೇವಲ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಜನಗಣತಿ ಮಾತ್ರವಲ್ಲ, ಅದು ಜಾತಿ ಜನಗಣತಿ ಕೂಡ ಹೌದು. ಅವೈಜ್ಞಾನಿಕ ಅಂದರೆ ಹೇಗೆ ಅಂತ ಅರ್ಥವಾ ಗುತ್ತಿಲ್ಲ. ಜಾತಿ ಗಣತಿ ವರದಿಯಿಂದ ಯಾವುದೇ ಸಮುದಾಯಕ್ಕೆ ಅನ್ಯಾಯ ಆಗುತ್ತದೆ ಎಂದು ಅನಿಸುವುದಿಲ್ಲ ಎಂದೂ ಕೋಳಿವಾಡ ಇದೇ ಸಂದರ್ಭದಲ್ಲಿ ಹೇಳಿದರು.

ವರದಿ ಜಾರಿಗೆ ವಿಳಂಬ ಮಾಡುವ ಅವಶ್ಯಕತೆ ಇಲ್ಲ, ಜಾತಿ ಗಣತಿ ಜಾರಿಗೆ ನನ್ನ ಬೆಂಬಲ ಇದೆ. ಒಂದು ತಿಂಗಳು ಸಮಯ ಕೊಟ್ಟು ಏನಾದರೂ ಬದಲಾವಣೆ ಇದ್ದರೆ ಮಾಡಲಿ. ಜಾತಿ ಜನಗಣತಿ ಮಾಡುವಾಗ ನಾನೇ ವೈಯಕ್ತಿಕವಾಗಿ ಹಲವು ಕಡೆ ಹೋಗಿದ್ದೇನೆ. ಪ್ರತಿಯೊಂದು ಮನೆಗೆ ಭೇಟಿ ನೀಡಿದ್ದಾರೆ, ಉಪಜಾತಿಗಳ ವಿವರವನ್ನೂ ದಾಖಲು ಮಾಡಿದ್ದಾರೆ. ಬಹಳ ಉತ್ತಮವಾಗಿ ಜನಗಣತಿ ಮಾಡಿದ್ದಾರೆ ಎಂದರು.

# ಬಿಜೆಪಿಗೆ ಬಲ ತುಂಬಿದ ವಿಧಾನಸಭಾ ಫಲಿತಾಂಶ

**ಲೋಕಸಭೆಯಲ್ಲಿ ನಿರಾಶಾದಾಯಕ ಪ್ರದರ್ಶನದಿಂದ ಹೊರ ಬಂದ ಕೇಸರಿ ಪಡೆ**

ನವದೆಹಲಿ, ಅ. 8 - ಹರಿಯಾಣ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಹ್ಯಾಟ್ರಿಕ್ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಗಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ನಿರೀಕ್ಷೆಯಷ್ಟು ಸ್ಥಾನ ಪಡೆಯಲು ಸಾಧ್ಯವಾಗದ ಬಿಜೆಪಿಗೆ, ಈ ಗೆಲುವು ಮತ್ತಷ್ಟು ಬಲ ತಂದಿದೆ.

ಹರಿಯಾಣದಲ್ಲಿ ಗೆಲ್ಲುವ ಜೊತೆಗೆ ಜಮ್ಮು ಮತ್ತು ಕಾಶ್ಮೀರದಲ್ಲೂ ಬಿಜೆಪಿ ಉತ್ತಮ ಸಾಧನೆ ಮಾಡಿದೆ. ಸಂಘಟನಾ ದಕ್ಷತೆ ಹಾಗೂ ನಾಯಕತ್ವದ ಕಾರಣ ದಿಂದಾಗಿ ಬಿಜೆಪಿ ಗೆಲುವು ಸಾಧಿಸಲು ಸಾಧ್ಯವಾಗಿದೆ. ಲೋಕಸಭಾ ಚುನಾವಣೆಯ ನಂತರ ಬಿಜೆಪಿಗೆ ಇನ್ನಷ್ಟು ಹಿನ್ನಡೆ ಆಗಲಿದೆ ಎಂಬ ಮಾತುಗಳು ಹುಸಿಯಾಗಿವೆ.

ಮುಂದಿನ ದಿನಗಳಲ್ಲಿ ಮಹಾರಾಷ್ಟ್ರ ಹಾಗೂ ಜಾರ್ಖಂಡ್ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿದೆ. ಹರಿಯಾಣದ ಗೆಲುವು ಬಿಜೆಪಿಯ ಉತ್ಸಾಹವನ್ನು ಇನ್ನಷ್ಟು ಹೆಚ್ಚಿಸಿದೆ. ಮಹಾರಾಷ್ಟ್ರದಲ್ಲಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆಯಾಗಿತ್ತು. ಆ ಹಿನ್ನಡೆಯಿಂದ ಹೊರ ಬರಲು ಬಿಜೆಪಿ ಬಯಸಲಿದೆ. ರಾಜ್ಯದಲ್ಲಿ ಮತ್ತೆ ಜಯಭೇರಿ ಭಾರಿಸಲು, ಹರಿಯಾಣ ಸ್ಫೂರ್ತಿಯಾಗಲಿದೆ.

ಹರಿಯಾಣ ವಿಧಾನಸಭಾ ಚುನಾವಣೆ ಯಲ್ಲಿ ಬಿಜೆಪಿ ಹಾಗೂ ಆರ್‌ಎಸ್‌ಎಸ್ ನಿಕಟವಾಗಿ ಕಾರ್ಯನಿರ್ವಹಿಸಿದ್ದವು. ಲೋಕಸಭಾ ಚುನಾವಣೆಯಲ್ಲಿ ಉಭಯರ ನಡುವೆ ಉತ್ತಮ ಹೊಂದಾಣಿಕೆ ಇರಲಿಲ್ಲ ಎಂಬ ಮಾತುಗಳು ಕೇಳಿಬಂದಿದ್ದವು.

ಸ್ಥಳೀಯ ವಿಷಯಗಳು ಹಾಗೂ ಜಾತಿ ವಿಷಯ ಬಂದಾಗ ಬಿಜೆಪಿಗೆ ಆಗಾಗ ಹಿನ್ನಡೆ ಯಾಗುತ್ತಿತ್ತು. ಆದರೆ ಹರಿಯಾಣದಲ್ಲಿ ಇದೇ ವಿಷಯಗಳನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಪಕ್ಷಕ್ಕೆ ತಿರುಗೇಟು ನೀಡುವಲ್ಲಿ ಬಿಜೆಪಿ ಯಶಸ್ವಿಯಾಗಿದೆ.

ಲೋಕಸಭಾ ಚುನಾವಣೆಯಲ್ಲಿ ಚರ್ಚೆ ಯಲ್ಲಿದ್ದ ವಿಷಯಗಳನ್ನು ಕೈಬಿಟ್ಟು, ಹೊಸ ವಿಷಯಗಳ ಚರ್ಚೆ ನಡೆಯುವಂತೆ ಮಾಡಿದ್ದು ಹರಿಯಾಣದಲ್ಲಿ ಗೆಲುವಿಗೆ ನೆರವಾಯಿತು ಎಂದು ಬಿಜೆಪಿ ನಾಯಕರೊಬ್ಬರು ಹೇಳಿದ್ದಾರೆ.

ರಾಜ್ಯದ ಉಸ್ತುವಾರಿ ಹೊಣೆ ಹೊತ್ತಿದ್ದ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಹಲವಾರು ಸಮುದಾಯಗಳ ಮುಖಂಡರ ಜೊತೆ ಸರಣಿ ಚರ್ಚೆ ನಡೆಸಿದ್ದರು. ಇದು ಜಾಟ್ ಹಾಗೂ ಉಳಿದ ಸಮುದಾಯದವರ ನಡುವಿನ ಅಂತರದ ಲಾಭ ಬಿಜೆಪಿಗೆ ದೊರಕಿಸಿ ಕೊಟ್ಟಿತು ಎನ್ನಲಾಗುತ್ತಿದೆ.

ಇತರೆ ಹಿಂದುಳಿದ ವರ್ಗಗಳ ಬಹುತೇಕರು, ದಲಿತರ ಬಡ ವರ್ಗ ಹಾಗೂ ಮೇಲ್ಜಾತಿಯವರು ಪ್ರಮುಖವಾಗಿ ಬಿಜೆಪಿಗೆ ಮತ ಚಲಾಯಿಸಿದ್ದಾರೆ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಿದ್ದಾರೆ.

ಮನೋಹರ ಲಾಲ್ ಖಟ್ಟರ್ ಅವರನ್ನು ಬದಲಿಸಿ, ಒ.ಬಿ.ಸಿ. ವರ್ಗದ ನಯಾಬ್ ಸಿಂಗ್ ಸೈನಿ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ತಂದಿದ್ದು ಬಿಜೆಪಿಗೆ ನೆರವಾದಂತಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ವಿಧಾನಸಭಾ ಚುನಾವಣೆಯಲ್ಲಿ ಕೇವಲ ನಾಲ್ಕು ಸಮಾವೇಶಗಳಲ್ಲಿ ಪಾಲ್ಗೊಂಡಿದ್ದರು. ರಾಜ್ಯದಲ್ಲಿ ಕಾಂಗ್ರೆಸ್ ಬಲಿಷ್ಠವಾಗುತ್ತಿದ್ದು ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸಲಿದೆ ಎಂಬ ಭಾವನೆ ಗಾಢವಾಗಿತ್ತು. ಲೋಕಸಭಾ ಚುನಾವಣೆಯಲ್ಲೂ ಸಹ ಬಿಜೆಪಿಗೆ ರಾಜ್ಯದಲ್ಲಿ ನಿರೀಕ್ಷಿತ ಸ್ಥಾನ ದೊರೆತಿರಲಿಲ್ಲ. ಆದರೆ ರಾಜ್ಯದಲ್ಲಿ ಬಿಜೆಪಿ 48 ಸ್ಥಾನಗಳನ್ನು ಗಳಿಸಿದೆ. ಇದು ರಾಜ್ಯದಲ್ಲಿ ಬಿಜೆಪಿ ಪಡೆದ ಅತಿ ಹೆಚ್ಚಿನ ಸ್ಥಾನಗಳಾಗಿವೆ. ಬಿಜೆಪಿಯ ಮತ ಗಳಿಕೆ ಸಹ ಶೇಕಡ ಮೂರರಷ್ಟು ಹೆಚ್ಚಾಗಿ ಶೇಕಡ 39.89 ಕ್ಕೆ ತಲುಪಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಬಿಜೆಪಿ 29 ಸ್ಥಾನ ಪಡೆದಿದೆ. ಇದು ರಾಜ್ಯದಲ್ಲಿ ಬಿಜೆಪಿ ಗಳಿಸಿದ ಅತಿ ಹೆಚ್ಚು ಸ್ಥಾನಗಳಾಗಿವೆ. ಅಲ್ಲದೆ ಜಮ್ಮು ವಲಯದಲ್ಲಿ ಬಿಜೆಪಿಗೆ ಸವಾಲು ಹಾಕುವಲ್ಲಿ ಕಾಂಗ್ರೆಸ್ ಎಡವಿದೆ.

ಮುಂದಿನ ದಿನಗಳಲ್ಲಿ ಮಹಾರಾಷ್ಟ್ರದ ಜೊತೆಗೆ ಜಾರ್ಖಂಡ್ ವಿಧಾನಸಭೆಗೂ ಚುನಾವಣೆ ನಡೆಯುವ ಸಾಧ್ಯತೆ ಇದೆ. ಈ ಚುನಾ ವಣೆಗಳನ್ನು ಎದುರಿಸುವ ಬಗ್ಗೆ ಬಿಜೆಪಿಯಲ್ಲಿ ಈಗ ಹೆಚ್ಚಿನ ಆತ್ಮವಿಶ್ವಾಸ ಮೂಡಿದೆ.

## ಹರಿಯಾಣ : ರಾಜಕೀಯ ಕುಟುಂಬಗಳಿಗೆ ಆಘಾತ

ಚಂಡೀಘಡ, ಅ. 8 - ಹರಿಯಾಣ ವಿಧಾನಸಭಾ ಚುನಾವಣೆ ಯಲ್ಲಿ ಹಲವಾರು ರಾಜಕೀಯ ಕುಟುಂಬಗಳಿಗೆ ಆಘಾತಕಾರಿ ಸೋಲು ಎದುರಾಗಿದೆ. ಆದರೂ ಕೆಲವರು ಜಯ ಗಳಿಸಿದ್ದಾರೆ. ಮಾಜಿ ಮುಖ್ಯಮಂತ್ರಿಗಳಾದ ಭಜನ್ ಲಾಲ್, ಬನ್ಸಿ ಲಾಲ್ ಹಾಗೂ ದೇವಿಲಾಲ್ ಕುಟುಂಬದವರು ಚುನಾವಣಾ ಕಣದಲ್ಲಿದ್ದರು. ಐದು ದಶಕಗಳಲ್ಲಿ ಮೊದಲ ಬಾರಿಗೆ ಭಜನ್ ಲಾಲ್ ಕುಟುಂಬದವರು ಅದಂಪುರ ಕ್ಷೇತ್ರದಲ್ಲಿ ಸೋಲು ಕಂಡಿದ್ದಾರೆ. ಈ ಕ್ಷೇತ್ರ ಸಾಂಪ್ರದಾಯಿಕವಾಗಿ ಕುಟುಂಬದ ಭದ್ರಕೋಟೆಯಾಗಿತ್ತು.

ಐ.ಎನ್.ಎಲ್.ಡಿ. ನಾಯಕ ಅಭಯ್ ಸಿಂಗ್ ಚೌತಾಲಾ, ಬಿಜೆಪಿಯ ಭವ್ಯ ಬಿಷ್ಣೋಯಿ ಹಾಗೂ ಜೆ.ಜೆ.ಪಿ.ಯ. ದುಶ್ಯಂತ್ ಚೌತಾಲಾ ಸೋಲು ಕಂಡಿದ್ದಾರೆ. ಬಿಜೆಪಿಯ ಶ್ರುತಿ ಚೌಧರಿ ಹಾಗೂ ಆರತಿ ರಾವ್ ಸಿಂಗ್ ಜಯ ಗಳಿಸಿದ್ದಾರೆ.

ಅದಂಪುರದಲ್ಲಿ ಮಾಜಿ ಮುಖ್ಯಮಂತ್ರಿ ಭಜನ್ ಲಾಲ್ ಅವರ ಮೊಮ್ಮಗ ಭವ್ಯ ಬಿಷ್ಣೋಯಿ ಅವರನ್ನು ಬಿಜೆಪಿ ಕಣಕ್ಕಿಳಿಸಿತ್ತು. ಆದರೆ, ಅವರು ಕಾಂಗ್ರೆಸ್ ಪಕ್ಷದ ಚಂದರ್ ಪ್ರಕಾಶ್ ವಿರುದ್ಧ ಸೋಲು ಕಂಡಿದ್ದಾರೆ. ಭವ್ಯ ಚಿಕ್ಕಪ್ಪ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಚಂದರ್ ಮೋಹನ್ ಅವರು ಪಚ್ಕುಲ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದಾರೆ.

## ಮುಗ್ಗರಿಸಿದ ಚುನಾವಣೋತ್ತರ ಸಮೀಕ್ಷೆಗಳು

ನವದೆಹಲಿ, ಅ. 8 - ಹರಿಯಾಣ ಹಾಗೂ ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಯಲ್ಲಿ ಜನಾದೇಶ ಅಳೆಯುವಲ್ಲಿ ಚುನಾವಣೋತ್ತರ ಸಮೀಕ್ಷೆಗಳು ದೊಡ್ಡ ಪ್ರಮಾಣದಲ್ಲಿ ವಿಫಲವಾಗಿವೆ.

ಹರಿಯಾಣದಲ್ಲಿ ಕಾಂಗ್ರೆಸ್ ಸರ್ಕಾರ ರಚಿಸಲಿದೆ ಎಂದು ಚುನಾವಣೋತ್ತರ ಸಮೀಕ್ಷೆಗಳು ತಿಳಿಸಿದ್ದವು. ಕೆಲ ಸಮೀಕ್ಷೆಗಳಂತೂ ಕಾಂಗ್ರೆಸ್ ಪಕ್ಷಕ್ಕೆ ಮೂರನೇ ಎರಡರಷ್ಟು ಬಹುಮತ ನೀಡಿದ್ದವು. ಆದರೆ ಹರಿಯಾಣದಲ್ಲಿ ಕಾಂಗ್ರೆಸ್ ಮುಖಭಂಗಕ್ಕೆ ಗುರಿಯಾಗಿದ್ದರೆ, ಬಿಜೆಪಿ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಗಿದೆ. ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಐವತ್ತಕ್ಕೂ ಹೆಚ್ಚು ಸ್ಥಾನ ಗಳಿಸಲಿದೆ ಎಂದು ಬಹುತೇಕ ಎಲ್ಲಾ ಸಮೀಕ್ಷೆಗಳು ಹೇಳಿದ್ದವು. ಬಿಜೆಪಿ 30 ಸ್ಥಾನ ಗಳಿಸಲು ಪರದಾಡಲಿದೆ ಎಂದು ತಿಳಿಸಲಾಗಿತ್ತು.


ಆದರೆ ಅಂತಿಮವಾಗಿ ಬಿಜೆಪಿ 48 ಸ್ಥಾನ ಗಳಿಸಿ ಅಧಿಕಾರಕ್ಕೆ ಬಂದಿದೆ. ಕಾಂಗ್ರೆಸ್ 37 ಸ್ಥಾನಕ್ಕೆ ಸೀಮಿತವಾಗಿದೆ.

ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಯಲ್ಲೂ ಸಹ ಚುನಾವಣೋತ್ತರ ಸಮೀಕ್ಷೆಗಳು ವಿಫಲವಾಗಿವೆ. ರಾಜ್ಯದಲ್ಲಿ ಅತಂತ್ರ ಪರಿಸ್ಥಿತಿ ಉಂಟಾಗಬಹುದು ಎಂದು ಹಲವು ಸಮೀಕ್ಷೆಗಳು ತಿಳಿಸಿದ್ದವು. ಆದರೆ, ನ್ಯಾಷನಲ್ ಕಾನ್ಫರೆನ್ಸ್ ಹಾಗೂ ಕಾಂಗ್ರೆಸ್ ಮೈತ್ರಿಕೂಟ ರಾಜ್ಯದಲ್ಲಿ 49 ಸ್ಥಾನ ಗಳಿಸುವ ಮೂಲಕ, ಅಧಿಕಾರದ ಚುಕ್ಕಾಣಿ ಹಿಡಿದಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲೂ ಸಹ ಚುನಾವಣಾ ಉತ್ತರ ಸಮೀಕ್ಷೆಗಳು ಮುಗ್ಗರಿಸಿದ್ದವು. ಬಿಜೆಪಿ ನೇತೃತ್ವದ ಮೈತ್ರಿಕೂಟ 350ಕ್ಕೂ ಸ್ಥಾನ ಪಡೆಯಲಿದೆ ಎಂದು ತಿಳಿಸಲಾಗಿತ್ತು. ಆದರೆ ಬಿಜೆಪಿ 240 ಸ್ಥಾನ ಪಡೆದಿತ್ತು ಹಾಗೂ ಮೈತ್ರಿಕೂಟ 293 ಸ್ಥಾನಕ್ಕೆ ಸೀಮಿತವಾಗಿತ್ತು.

**ಹರಿಯಾಣ : ಫಲ ನೀಡದ ಕಾಂಗ್ರೆಸ್ ಲೆಕ್ಕಾಚಾರ**

# ನಿರುದ್ಯೋಗ, ರೈತರು, ಅಗ್ನಿಪಥದ ಅಸ್ತ್ರ ವಿಫಲ



ಚಂಡೀಘಡ, ಅ. 8 – ನಿರುದ್ಯೋಗ, ರೈತರ ಸಂಕಷ್ಟ ಹಾಗೂ ಅಗ್ನಿಪಥ ಸೇರಿದಂತೆ ಹಲವು ವಿಷಯಗಳನ್ನು ಮುಂದಿಟ್ಟುಕೊಂಡು ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಲು ಕಾಂಗ್ರೆಸ್ ನಡೆಸಿದ ಲೆಕ್ಕಾಚಾರ ಫಲ ನೀಡಿಲ್ಲ.

ಕಾಂಗ್ರೆಸ್ ಹಿರಿಯ ನಾಯಕರಾದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿ ವಾದ್ರಾ ಸೇರಿ ದಂತೆ ಹಲವು ಹಿರಿಯ ನಾಯಕರು ಹರಿಯಾಣದಲ್ಲಿ ತೀವ್ರ ಪ್ರಚಾರ ನಡೆಸಿದ್ದರು. ದಶಕದ ನಂತರ ಹರಿಯಾಣದಲ್ಲಿ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯುವ ವಿಶ್ವಾಸ ಕಾಂಗ್ರೆಸ್ ನಾಯಕರಲ್ಲಿತ್ತು. ಆದರೆ, ವಿಧಾನಸಭಾ ಚುನಾವಣೆಯಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಸರಳ ಬಹುಮತದೊಂದಿಗೆ ಕೇಸರಿ ಪಕ್ಷ ರಾಜ್ಯದಲ್ಲಿ ತನ್ನ ಪ್ರಾಬಲ್ಯ ಮುಂದುವರೆಸಿದೆ.

ನಿರುದ್ಯೋಗ, ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ, ಅಗ್ನಿಪಥ ಸೈನ್ಯದ ನೇಮಕ ಯೋಜನೆಗೆ ವಿರೋಧ ಹಾಗೂ ಹಣದುಬ್ಬರ ಸೇರಿದಂತೆ ಹಲವು ವಿಷಯಗಳನ್ನು ಕಾಂಗ್ರೆಸ್ ಪ್ರಮುಖವಾಗಿ ಪ್ರಸ್ತಾಪಿಸಿತ್ತು.

ಮತ್ತೊಂದೆಡೆ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಸೇರಿದಂತೆ ಬಿಜೆಪಿಯ ನಾಯಕರು, ಹರಿ ಯಾಣದ ಬಿಜೆಪಿ ಸರ್ಕಾರ ಪಾರದರ್ಶಕವಾಗಿ ಕಾರ್ಯನಿರ್ವಹಿಸುತ್ತಿದೆ ಹಾಗೂ ಉದ್ಯೋಗಾವಕಾಶ ಕಲ್ಪಿಸಿದೆ ಎಂದು ಹೇಳಿದ್ದರು. ಅಗ್ನಿವೀರ್ ಸೈನಿಕರಿಗೆ ಹರಿಯಾಣದಲ್ಲಿ ಉದ್ಯೋಗ ಕಲ್ಪಿಸುವುದಾಗಿ ಭರವಸೆ ನೀಡಿದ್ದರು.

ಹರಿಯಾಣದಲ್ಲಿ 24 ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಲಾಗುತ್ತಿದೆ. ಇಷ್ಟೊಂದು ಬೆಳೆಗಳಿಗೆ ಬೆಂಬಲ ಬೆಲೆ ನೀಡುತ್ತಿರುವ ಏಕೈಕ ರಾಜ್ಯ ಹರಿಯಾಣ ಎಂದು ಬಿಜೆಪಿ ಹೇಳಿತ್ತು.

ಇದರ ಜೊತೆಗೆ ಮತ್ತೆ ಅಧಿಕಾರಕ್ಕೆ ಬಂದಲ್ಲಿ ಮಹಿಳೆಯರಿಗೆ ಪ್ರತಿ ತಿಂಗಳು 2,100 ರೂ. ನೀಡಲಾಗುವುದು ಹಾಗೂ ಅಡುಗೆ ಅನಿಲವನ್ನು 500 ರೂ. ಬೆಲೆಗೆ ನೀಡಲಾಗುವುದು ಎಂದು ಬಿಜೆಪಿ ಭರವಸೆ ನೀಡಿತ್ತು.

ಕಳೆದ ಮಾರ್ಚ್ ತಿಂಗಳಲ್ಲಿ ಮುಖ್ಯಮಂತ್ರಿ ಸ್ಥಾನದಿಂದ ಮನೋಹರ ಲಾಲ್ ಖಟ್ಟರ್ ಕೆಳಗಿಳಿಸಿದ್ದ ಬಿಜೆಪಿ, ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ನಯಾಬ್ ಸಿಂಗ್ ಸೈನಿ ಅವರಿಗೆ ಅಧಿಕಾರ ನೀಡಿತ್ತು. ಬಿಜೆಪಿಯ ಈ ನಿರ್ಧಾರ ಚುನಾವಣೆಯಲ್ಲಿ ನೆರವಾಗಿರುವಂತಿದೆ.

ಸೈನಿ ಅವರ ನೇತೃತ್ವದಲ್ಲಿ ಬಿಜೆಪಿಯು ಜಾಟ್ ಸಮುದಾಯದ ಹೊರತಾದ ಮತಗಳನ್ನು ಒಗ್ಗೂಡಿಸುವ ಪ್ರಯತ್ನ ನಡೆಸಿತ್ತು. ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಜಾತಿ ಪ್ರಮುಖ ಅಸ್ತ್ರವಾಗಿತ್ತು.

ದಲಿತರ ವಿಷಯಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ವಿರುದ್ಧ ಬಿಜೆಪಿ ನಿರಂತರವಾಗಿ ವಾಗ್ದಾಳಿ ನಡೆಸಿತ್ತು. ಇದೂ ಸಹ ಮತದಾರರ ಮೇಲೆ ಪ್ರಭಾವ ಬೀರಿರುವಂತಿದೆ.

2005ರ ಗೊಹನ ಹಾಗೂ 2010ರ ಮಿರ್ಚಪೂರ್ ದಲಿತ ವಿರೋಧಿ ಹಿಂಸಾಚಾರ ಘಟನೆಗಳನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಚುನಾವಣಾ ಭಾಷಣಗಳಲ್ಲಿ ಪ್ರಮುಖವಾಗಿ ಪ್ರಸ್ತಾಪಿಸಿ, ಕಾಂಗ್ರೆಸ್ ಪಕ್ಷ ದಲಿತ ವಿರೋಧಿ ಎಂದು ಹೇಳಿದ್ದರು.

ಕಾಂಗ್ರೆಸ್ ಪಕ್ಷದಲ್ಲಿರುವ ದಲಿತ ನಾಯಕರಾದ ಕುಮಾರಿ ಸೆಲ್ಜ ಸೇರಿದಂತೆ ಹಲವು ದಲಿತರು ಅವಮಾನಕ್ಕೆ ಗುರಿಯಾಗಿದ್ದಾರೆ ಎಂದು ಬಿಜೆಪಿ ಆರೋಪಿಸಿತ್ತು. ವಿಧಾನಸಭಾ ಚುನಾವಣಾ ಟಿಕೆಟ್ ಹಂಚಿಕೆಯಲ್ಲಿ ಕಾಂಗ್ರೆಸ್ ನಾಯಕ ಭೂಪಿಂದರ್ ಸಿಂಗ್ ಹೂಡ ಪ್ರಬಲರಾಗಿದ್ದಾರೆ ಎಂಬ ಕಾರಣಕ್ಕಾಗಿ ಸೆಲ್ಜಾ ಮುನಿಸಿಕೊಂಡಿದ್ದಾರೆ ಎಂಬ ವರದಿಗಳಿದ್ದವು.

## ಹರಿಯಾಣ ಫಲಿತಾಂಶ ಒಪ್ಪುವುದಿಲ್ಲ : ಕಾಂಗ್ರೆಸ್

**ಮತಯಂತ್ರ, ಎಣಿಕೆಯ ಬಗ್ಗೆ ಅನುಮಾನ**

ನವದೆಹಲಿ,ಅ.8- ಹರಿಯಾಣ ವಿಧಾನ ಸಭಾ ಚುನಾವಣೆಯ ಮತ ಎಣಿಕೆ ಪ್ರಕ್ರಿಯೆ ಹಾಗೂ ಮತ ಯಂತ್ರ ಕಾರ್ಯ ನಿರ್ವಹಣೆ ಪ್ರಕ್ರಿಯೆ ಪ್ರಾಮಾಣಿಕತೆ ಬಗ್ಗೆ ಗಂಭೀರ ವಿಷಯ ಗಳಿವೆ. ವಿಧಾನಸಭಾ ಚುನಾವಣೆಯ ಫಲಿತಾಂಶ ವನ್ನು ಒಪ್ಪುವುದಿಲ್ಲ ಎಂದು ಕಾಂಗ್ರೆಸ್ ಹೇಳಿದೆ.

ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಸಂಚು ನಡೆದಿದೆ. ಇಲ್ಲಿ ಪ್ರಜಾಪ್ರಭುತ್ವ ಸೋತಿದೆ ಹಾಗೂ ಆಡಳಿತ ಗೆದ್ದಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರ ಹಾಗೂ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ನಮ್ಮ ಅಭ್ಯರ್ಥಿಗಳು ಗಂಭೀರ ಪ್ರಶ್ನೆಗಳನ್ನು ಮುಂದಿಟ್ಟಿದ್ದಾರೆ. ಇವುಗಳನ್ನು ನಾವು ಚುನಾವಣಾ ಆಯೋಗದ ಗಮನಕ್ಕೆ ತರುತ್ತೇವೆ ಎಂದಿದ್ದಾರೆ.

ಹರಿಯಾಣ ವಿಧಾನಸಭಾ ಚುನಾವಣೆಯ ಫಲಿತಾಂಶವನ್ನು ತಿರುಚಲಾಗಿದೆ, ಜನಾದೇಶ ವನ್ನು ತಿರುಚಲಾಗಿದೆ. ಪಾರದರ್ಶಕ ಹಾಗೂ ಪ್ರಜಾಸತ್ತಾತ್ಮಕ ಪ್ರಕ್ರಿಯೆಗೆ ಸೋಲಾಗಿದೆ. ಹರಿಯಾಣದ ಅಧ್ಯಾಯ ಮುಗಿದಿಲ್ಲ, ಇದು ಮುಂದುವರೆಯಲಿದೆ ಎಂದು ಹೇಳಿದ್ದಾರೆ.

ಹರಿಯಾಣ ವಿಧಾನಸಭಾ ಚುನಾವಣೆಯ ಫಲಿತಾಂಶ ಸಂಪೂರ್ಣ ಅನಿರೀಕ್ಷಿತವಾಗಿದೆ, ಅಚ್ಚರಿದಾಯಕವಾಗಿದೆ ಹಾಗೂ ನಿರೀಕ್ಷೆಗೆ ವಿರುದ್ಧವಾಗಿದೆ.

ನೆಲದ ವಾಸ್ತವತೆಗೆ ವಿರುದ್ಧವಾಗಿ ಫಲಿತಾಂಶ ದೊರೆತಿದೆ. ಹರಿಯಾಣದ ಜನರು ಬದಲಾವಣೆ ಬಯಸಿದ್ದರು ಎಂದು ರಮೇಶ್ ಹೇಳಿದ್ದಾರೆ. ಹಿಸಾರ್, ಮಹೇಂದ್ರಘಡ ಹಾಗೂ ಪಾಣಿಪತ್ ಜಿಲ್ಲೆಗಳಲ್ಲಿ ಮತಯಂತ್ರಗಳ ಬಗ್ಗೆ ದೂರುಗಳಿವೆ. ಶೇ.99ರಷ್ಟು ಬ್ಯಾಟರಿ ಇರುವ ಮತಯಂತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಶೇಕಡ 70ರಷ್ಟು ಬ್ಯಾಟರಿ ಇರುವ ಮತಯಂತ್ರ ಗಳಲ್ಲಿ ಕಾಂಗ್ರೆಸ್ ಗೆದ್ದಿದೆ. 12ರಿಂದ 14 ವಿಧಾನಸಭಾ ಕ್ಷೇತ್ರಗಳಲ್ಲಿ ದೂರುಗಳು ಬಂದಿವೆ ಎಂದು ರಮೇಶ್ ಹೇಳಿದ್ದಾರೆ.

# ಬಿಜೆಪಿ ಹ್ಯಾಟ್ರಿಕ್

**(1ನೇ ಪುಟದಿಂದ)** ಸ್ಥಾನಗಳಲ್ಲಿ ಜಯ ಗಳಿಸಿದೆ. ಮೈತ್ರಿಕೂಟ ಬಹುಮತಕ್ಕೆ ಅಗತ್ಯವಾದ ಸ್ಥಾನಗಳನ್ನು ಪಡೆದುಕೊಂಡಿದೆ.

ಬಿಜೆಪಿ 29 ಸ್ಥಾನ ಪಡೆದಿದೆ. ಆಮ್ ಆದ್ಮಿ ಪಾರ್ಟಿ ಒಂದು ಸ್ಥಾನ ಗಳಿಸುವ ಮೂಲಕ ರಾಜ್ಯದಲ್ಲಿ ಮೊದಲ ಬಾರೀ ಖಾತೆ ತೆರೆದಿದೆ. ಪಿ.ಡಿ.ಪಿ. ಪಕ್ಷ ಕೇವಲ ಮೂರು ಸ್ಥಾನ ಪಡೆಯುವ ಮೂಲಕ ಮುಖಭಂಗಕ್ಕೀಡಾಗಿದೆ. ಸ್ವತಂತ್ರ ಅಭ್ಯರ್ಥಿಗಳು 7 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದಾರೆ.

ಐ.ಎನ್.ಡಿ.ಐ.ಎ. ಮೈತ್ರಿಕೂಟದ ಅಂಗ ಪಕ್ಷಗಳಾದ ನ್ಯಾಷನಲ್ ಕಾನ್ಫರೆನ್ಸ್ ಹಾಗೂ ಕಾಂಗ್ರೆಸ್ ಪಕ್ಷಗಳು, ಕಾಶ್ಮೀರದಲ್ಲಿ ಮುಂದಿನ ಸರ್ಕಾರ ರಚಿಸಲಿವೆ. ಎರಡೂ ಪಕ್ಷಗಳು ರಾಜ್ಯದ 90 ಸ್ಥಾನಗಳ ಪೈಕಿ 48 ಸ್ಥಾನಗಳನ್ನು ತಮ್ಮದಾಗಿಸಿಕೊಂಡಿವೆ. ನ್ಯಾಷನಲ್ ಕಾನ್ಫರೆನ್ಸ್ ನಾಯಕ ಓಮರ್‌ಅಬ್ದುಲ್ಲಾಮುಂದಿನಮುಖ್ಯಮಂತ್ರಿಯಾಗಲಿದ್ದಾರೆ.

2019ರಲ್ಲಿ ಜಮ್ಮು ಮತ್ತು ಕಾಶ್ಮೀರವನ್ನು ವಿಭಜಿಸಿ ಕೇಂದ್ರಾಡಳಿತ ಪ್ರದೇಶ ಮಾಡಲಾಗಿತ್ತು. ನಂತರ ನಡೆದ ಮೊದಲ ಚುನಾವಣೆಯಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಭಾರೀ ಗೆಲುವು ಸಾಧಿಸಿದೆ. ತಾನು ಸ್ಪರ್ಧಿಸಿದ್ದ 51 ಸ್ಥಾನಗಳ ಪೈಕಿ 42 ರಲ್ಲಿ ಗೆಲುವು ಗಳಿಸಿದೆ. ಮತ್ತೊಂದೆಡೆ ಅದರ ಮೈತ್ರಿ ಪಕ್ಷವಾದ ಕಾಂಗ್ರೆಸ್, ತಾನು ಸ್ಪರ್ಧಿಸಿದ್ದ 32 ಸ್ಥಾನಗಳ ಪೈಕಿ ಕೇವಲ ಆರರಲ್ಲಿ ಗೆಲುವು ಕಂಡಿದೆ.

ಬಿಜೆಪಿ 29 ಸ್ಥಾನಗಳನ್ನು ಪಡೆಯುವ ಮೂಲಕ ಎರಡನೇ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. 2014ರಲ್ಲಿ ರಾಜ್ಯದಲ್ಲಿ ಬಿಜೆಪಿ 25 ಸ್ಥಾನಗಳನ್ನು ಪಡೆದಿತ್ತು. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ 62 ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ತನ್ನ ಪ್ರಾಬಲ್ಯ ಇರುವ ಜಮ್ಮು ಕಡೆ ಹೆಚ್ಚು ಗಮನ ಹರಿಸಿತ್ತು. ಆದರೆ ಬಿಜೆಪಿಯ ರಾಜ್ಯಾಧ್ಯಕ್ಷ ರವೀಂದ್ರ ರೈನಾ ಅವರು ನೌಶೆರಾ ವಿಧಾನಸಭಾ ಕ್ಷೇತ್ರದಲ್ಲಿ ಸೋಲು ಕಂಡಿದ್ದಾರೆ.

ಪ್ರತ್ಯೇಕತಾವಾದಿ ಪಕ್ಷಗಳಾದ ಅವಾಮಿ ಇತ್ತೆಹಾದ್ ಪಾರ್ಟಿ ಹಾಗೂ ಜಮಾತ್ ಎ ಇಸ್ಲಾಮಿ ಚುನಾವಣೆ ಮೇಲೆ ಯಾವುದೇ ಪರಿಣಾಮ ಬೀರಲು ವಿಫಲವಾಗಿದೆ.

# ಕೆವೈಸಿ ಅಪ್‌ಡೇಟ್ ಮಾಡಲು ಸೂಚನೆ




**(1ನೇ ಪುಟದಿಂದ)** ಯೋಜನೆಗಳು ಪ್ರತಿಯೊಬ್ಬ ಅರ್ಹ ನಾಗರಿಕರಿಗೂ ಸಿಗುವಂತಾಗಬೇಕು. ಆದ್ದರಿಂದ ಜಿಲ್ಲೆಯ ಪ್ರತಿಯೊಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯೋಜನೆಗಳ ಮಾಹಿತಿ ಕುರಿತು ಆಂದೋಲನ ಕೈಗೊಳ್ಳಬೇಕೆಂದು ಎಲ್ಲಾ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಈ ಯೋಜನೆಗಳು ಯಾರಿಗೆ ತಲುಪುತ್ತಿಲ್ಲ, ಅಂತವರಿಗೆ ಅರಿವು ಮೂಡಿಸಬೇಕು. ನ್ಯಾಯಬೆಲೆ ಅಂಗಡಿಗಳಲ್ಲಿ ದಾಸ್ತಾನು ನೀಡುವ ಸಮಯದ ವೇಳಾಪಟ್ಟಿಯನ್ನು ಸೂಚನಾ ಫಲಕದಲ್ಲಿ ಅಳವಡಿಸಬೇಕು ಎಂದು ತಿಳಿಸಿದರು.

ಅನ್ನಭಾಗ್ಯ ಯೋಜನೆಯ ಕುರಿತು ಉಪನಿರ್ದೇಶಕರು ಮಾಹಿತಿ ನೀಡಿ, ದಾವಣಗೆರೆ ಜಿಲ್ಲೆಯಲ್ಲಿ ಜುಲೈ 2023 ರಿಂದ ಜೂನ್ 2024 ರವರೆಗೆ ಒಟ್ಟಾರೆ 341792 ಪಡಿತರ ಚೀಟಿದಾರರಿದ್ದು, ಅದರಲ್ಲಿ 1226537 ಫಲಾನುಭವಿಗಳು ಅನ್ನಭಾಗ್ಯ ಯೋಜನೆ ವ್ಯಾಪ್ತಿಗೆ ಬರುತ್ತಿದ್ದು, ಈ ಎಲ್ಲಾ ಫಲಾನುಭವಿಗಳಿಗೆ ಐದು ಕೆ.ಜಿ. ಅಕ್ಕಿಯ ಹಣವನ್ನು ಡಿ.ಬಿ.ಟಿ. ಮೂಲಕ ಪ್ರತಿ ತಿಂಗಳು ಪಾವತಿಸ ಲಾಗಿದೆ. 2023ರ ಜುಲೈ ನಿಂದ 2024ರ ಜುಲೈವರೆಗೆ ರೂ.247.28 ಕೋಟಿ ವೆಚ್ಚ ಮಾಡಲಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಮಾಹಿತಿ ನೀಡಿ, ಗೃಹಲಕ್ಷ್ಮಿ ಯೋಜನೆಯಡಿ ಎಲ್ಲಾ ತಾಲ್ಲೂಕುಗಳಿಂದ 366937 ಫಲಾನುಭವಿಗಳು ನೋಂದಣಿ ಯಾಗಿದ್ದು, ಇದರಲ್ಲಿ 358289 ಫಲಾನುಭವಿಗಳು ಯೋಜನೆಯ ಲಾಭ ಪಡೆಯುತ್ತಿದ್ದಾರೆ. ಯೋಜನೆ ಆರಂಭವಾದ 2023ರ ಆಗಸ್ಟ್‌ನಿಂದ 2024ರ ಮಾರ್ಚ್‌ವರೆಗೆ ರೂ.751.38 ಕೋಟಿ ಡಿಬಿಟಿ ಮೂಲಕ ಮಹಿಳೆಯರಿಗೆ ಪಾವತಿಸಲಾಗಿದೆ.

ಗೃಹಜ್ಯೋತಿ ಯೋಜನೆಯಡಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಚಾಲ್ತಿಯಲ್ಲಿರುವ 487228 ಸ್ಥಾವರಗಳಲ್ಲಿ 433758 ಸ್ಥಾವರಗಳ ಫಲಾನುಭವಿಗಳು ಇದರ ಲಾಭ ಪಡೆಯುತ್ತಿದ್ದು 53470 ಆರ್.ಆರ್.ಸಂಖ್ಯೆಯವರು ಮಾತ್ರ ಗೃಹಜ್ಯೋತಿ ಯೋಜನೆಗೆ ನೋಂದಣಿಯಾಗಿರುವುದಿಲ್ಲ ಎಂದು ಮಾಹಿತಿ ನೀಡಿದರು.

ಶಕ್ತಿ ಯೋಜನೆಯಡಿ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿ 11 ಜೂನ್ 2023 ರಿಂದ ಸೆ. 2024 ರವರೆಗೆ ಒಟ್ಟಾರೆ 5,02,97,487 ಪ್ರಯಾಣಿಕರು ಬಸ್‌ಗಳಲ್ಲಿ ಸಂಚರಿಸಿದ್ದು, ಪ್ರಯಾಣ ವೆಚ್ಚವಾಗಿ ಒಟ್ಟು ರೂ.136,65,25,048 ಗಳನ್ನು ಸರ್ಕಾರ ಭರಿಸುತ್ತಿದೆ ಎಂದು ಮಾಹಿತಿ ನೀಡಿದರು.

ಯುವನಿಧಿ ಯೋಜನೆಯಡಿ ಜನವರಿ 2024 ರಿಂದ ಜುಲೈ 2024ರವರೆಗೆ 12243 ಪದವಿ ಫಲಾನುಭವಿಗಳಿಗೆ ಡಿ.ಬಿ.ಟಿ. ಮೂಲಕ ಪಾವತಿಯಾದ ಮೊತ್ತ ರೂ. 3,67,29,000 ಹಾಗೂ 147 ಡಿಪ್ಲೊಮೋ ಫಲಾನುಭವಿಗಳಿಗೆ ರೂ. 2,20,500 ಗಳನ್ನು ಪಾವತಿಸಲಾಗಿದೆ.

ಮುಖ್ಯ ಯೋಜನಾಧಿಕಾರಿ ಮಲ್ಲಾನಾಯ್ಕ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷರುಗಳಾದ ಕೆ.ಎನ್. ಮಂಜುನಾಥ, ನಂಜಾನಾಯ್ಕ, ಹನೀಫ್ ಪಾ ಹಾಗೂ ಅನುಷ್ಠಾನ ಸಮಿತಿಯ ಎಲ್ಲಾ ಸದಸ್ಯರುಗಳು, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ಹರಿಹರದಲ್ಲಿ ಬಿಜೆಪಿ ವಿಜಯೋತ್ಸವ



ಹರಿಹರ, ಅ,8- ಹರಿಯಾಣ ರಾಜ್ಯದಲ್ಲಿ ಬಿಜೆಪಿ ಪಕ್ಷ ಅಭೂತಪೂರ್ವ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ, ನಗರದ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ವಿಜಯೋತ್ಸವ ಆಚರಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್, ಜಿಪಂ ಮಾಜಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಣ್ಣಪ್ಪ ಐರಣಿ, ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಪ್ರಧಾನ ಕಾರ್ಯದರ್ಶಿ ತುಳಜಪ್ಪ ಭೂತೆ, ಗ್ರಾಮೀಣ ಘಟಕದ ಅಧ್ಯಕ್ಷ ಲಿಂಗರಾಜ ಹಿಂಡಸಗಟ್ಟೆ, ಪ್ರಧಾನ ಕಾರ್ಯದರ್ಶಿ ಕಡರನಾಯ್ಕನಹಳ್ಳಿ ಮಹಾಂತೇಶ್, ಮುಖಂಡರಾದ ರಮೇಶ್ ನಂದಿಗಾವಿ, ರವಿರಾಯ್ಕರ್, ಜಡಿಯಪ್ಪ, ಕೆಂಚನಹಳ್ಳಿ ಮಹಾಂತೇಶಪ್ಪ, ಪ್ರಭಾಕರ್, ವಿನಾಯಕ ಆರಾಧ್ಯಮಠ, ಗಣೇಶ, ಶಶಿಧರ್, ವಿಜಯಕುಮಾರ್ ಇತರರು ಹಾಜರಿದ್ದರು.

## ಉಪಸಮಿತಿ, ಇಲ್ಲವೇ ಸದನಕ್ಕೆ ಜಾತಿ ಗಣತಿ

**(1ನೇ ಪುಟದಿಂದ)** ರೊಂದಿಗೆ ಮಾತನಾಡಿದ ಪರಮೇಶ್ವರ್, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು ಹಾಗೂ ದಲಿತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಮುಂದಿನ ದಿನಗಳಲ್ಲಿ ಯೋಜನೆಗಳನ್ನು ರೂಪಿಸಲು ಜಾತಿ ಗಣತಿ ನೆರವಾಗಲಿದೆ ಎಂದು ಹೇಳಿದರು.

## ನೆಲೆಸಲು ನೆರವಾದವನ ಬಂಧನ

**(1ನೇ ಪುಟದಿಂದ)**ನಂತರ ಇನ್ನೂ ಮೂವರನ್ನು ಪೀಣ್ಯದಲ್ಲಿ ಬಂಧಿಸಲಾಗಿತ್ತು.

ಈ ಬಗ್ಗೆ ತನಿಖೆ ನಡೆಸಿದಾಗ ಕೆಲವರು ದಾವಣಗೆರೆ ಜಿಲ್ಲೆಯಲ್ಲಿ ನೆಲೆಸಿದ್ದು ಪತ್ತೆಯಾಗಿತ್ತು. ನಂತರ ಅವರನ್ನು ವಶಕ್ಕೆ ತೆಗೆದುಕೊಳ್ಳಲಾಗಿತ್ತು. ಈ ಎಲ್ಲರಿಗೂ ಪರ್ವೇಜ್ ನಕಲಿ ದಾಖಲೆಗಳನ್ನು ಸೃಷ್ಟಿಸಿ ಹಿಂದೂಗಳ ಹೆಸರಿನಲ್ಲಿ ಭಾರತದಲ್ಲಿ ನೆಲೆಸಲು ನೆರವಾಗಿದ್ದ ಎಂಬುದು ಕಂಡುಬಂದಿತ್ತು.

ಪರ್ವೇಜ್ ವಶಕ್ಕೆ ತೆಗೆದುಕೊಳ್ಳಲಾಗಿದ್ದು ಆತನ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.


**ಬೇಕಾಗಿದ್ದಾರೆ**
ಕ್ರೆಡಿಟ್ ಕೋ-ಆಪ್. ಸೊಸೈಟಿ
1) ಕಾರ್ಯದರ್ಶಿ BA or B.Com - 2
(ಕಂಪ್ಯೂಟರ್ ನಾಲೆಡ್ಜ್ ಹೊಂದಿರಬೇಕು)
2) ಕ್ಯಾಷಿಯರ್ - B.Com or PUC - 1
(ಮಹಿಳೆಯರಿಗೆ ಹೆಚ್ಚಿನ ಆದ್ಯತೆ) ಸಂಪರ್ಕಿಸಿ :
99802 40407

**WANTED**
Banking Sector
Tele Caller
(Female Only)
Qualification : Any Degree.
85500 23110
Interview Time - 11AM

**ಉದ್ಯೋಗಾವಕಾಶ**
ಅಂಗಡಿಯಲ್ಲಿ ಕೆಲಸ ಮಾಡಲು 5 ಜನ ಹುಡುಗರು ಬೇಕಾಗಿದ್ದಾರೆ
ಸಮಯ : ಬೆ. 9 ರಿಂದ ರಾತ್ರಿ 8 ರವರೆಗೆ
ಕಶೆಟ್ಟರ್ ಇಂಡಸ್ಟ್ರಿಯಲ್ ಎಸೆನ್ಸಿಯಲ್ಸ್
ಲಾಯರ್ ರೋಡ್, ದಾವಣಗೆರೆ.

**WANTED**
Banking Sector Tele Caller
(Female Only)
Qualification : Any Degree
90715 55081
Interview Time : 11AM

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ
ಅಡುಗೆ ಮಾಡಲು
ಅಡುಗೆ ಭಟ್ಟರು ಬೇಕಾಗಿದ್ದಾರೆ.
ಸಂಪರ್ಕಿಸಿ:
ಮೊ: 90367 34919

**Female Telecaller Required**
Experience : 1 year
Language : English, Kannada and Hindi.
Call for interview
95383 16195

**ಬಾಡಿಗೆಗೆ ಇದೆ**
ನಗರದ ಹೃದಯ ಭಾಗದಲ್ಲಿರುವ ಕೆಟಿಜೆ ನಗರದ ನಿಟ್ಟುವಳ್ಳಿ ಮುಖ್ಯರಸ್ತೆಯ 8ನೇ ಕ್ರಾಸ್ ಹತ್ತಿರ 16x22 ವಿಸ್ತೀರ್ಣವುಳ್ಳ ಮೊದಲನೇ ಮಹಡಿಯ ಶೌಚಾಲಯ ವ್ಯವಸ್ಥೆಯೊಂದಿಗೆ ಕಛೇರಿ ಸೌಲಭ್ಯಕ್ಕೆ ಇದೆ. ಸಂಪರ್ಕಿಸಿ :
70191 24597, 99802 06216

**ಬೇಕಾಗಿದ್ದಾರೆ**
ಟಾಟಾ ಏಸ್ ಓಡಿಸಬಲ್ಲ ಬ್ಯಾಡ್ಜ್‌ವುಳ್ಳ ಡ್ರೈವರ್ ಹಾಗೂ ಎಸ್.ಎಸ್.ಎಲ್.ಸಿ ಪಾಸ್ ಫೇಲಾಗಿರುವವರು ಸೇಲ್ಸ್ ಮನ್ ಹಾಗೂ ಡಿಲೆವರಿ ಬಾಯ್ಸ್ ಕೆಲಸಕ್ಕೆ ಪಾರ್ಟ್ ಟೈಂ/ಫುಲ್ ಟೈಮ್ ಬೇಕಾಗಿದ್ದಾರೆ. 18 ವರ್ಷ ಮೇಲ್ಪಟ್ಟ ಅನುಭವವುಳ್ಳವರು ಸಂಪರ್ಕಿಸಿ :
ಮಣಿಕಂಠ ಏಜೆನ್ಸೀಸ್, ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

ರಕ್ತ ದಾನ
ಶ್ರೇಷ್ಠ ದಾನ

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**HOUSE FOR LEASE / RENT**
2 BHK- 30x50, 2nd floor
5th cross, Mahalakshmi Badavane, Behind Kaveri Apartment, Davanagere.
99809 33002

**ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಮಾತಾ ವಿದ್ಯಾಸಂಸ್ಥೆ (ರಿ.). ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ B.A., B.Ed., ಅಥವಾ B.A./B.Sc.,/B. Com ತರಬೇತಿ ಹೊಂದಿದ ಶಿಕ್ಷಕ/ಕಿಯರು ಹಿರಿಯ ಪ್ರಾಥಮಿಕ ತರಗತಿಗಳಿಗೆ ಬೋಧಿಸಲು ಬೇಕಾಗಿದ್ದಾರೆ.
99640 17729

**ಬೇಕಾಗಿದ್ದಾರೆ**
ಸಪ್ಲೈಯರ್, ಚೈನೀಸ್, ಭಟ್ರು, ಬೇಕಾಗಿದ್ದಾರೆ.
95130 33363

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist
(ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿನಾಂಕ 9.10.2024ರ ಬುಧವಾರ
ದಿನಾಂಕ 10.10.2024ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**DUPLEX HOUSE FOR RENT**
40 × 60 fully furnished 5 BHK Duplex house, 4 attached washroom including Corporation water & Borewell water.
Vidyanagar last city bus stop, Davangere
8951938228, 8050222181

**ಶ್ರೀ ಸಾಯಿ ಫೈನಾನ್ಸ್ (ರಿ)**
ನಮ್ಮಲ್ಲಿ ವ್ಯಾಪಾರಿಗಳಿಗೆ ಫೈನಾನ್ಸ್ ನೀಡಲಾಗುವುದು. ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್ ಪ್ರಾವಿಜನ್ ಸ್ಟೋರ್, ಎಗ್‌ರೈಸ್ ಸೆಂಟರ್ ಇತ್ಯಾದಿ.
ಶಿವಪ್ಪಯ್ಯ ಸರ್ಕಲ್, ದಾವಣಗೆರೆ. ಸಂಪರ್ಕಿಸಿ.
96860 22969

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET /
CLAT - Printed Notes +
Study Materials
97398 65711, 94822 44114

**ಮನೆ ಬಾಡಿಗೆಗಿದೆ**
ದಾವಣಗೆರೆ ಎಸ್.ಎ. ರವೀಂದ್ರನಾಥ್ ನಗರ (ನಂ. 604/334) ಚೌಡೇಶ್ವರಿ ದೇವಸ್ಥಾನದ ಹತ್ತಿರ, ಶ್ರೀ ಲಕ್ಷ್ಮಿ ವೆಂಕಟೇಶ್ವರ ಸದನದಲ್ಲಿ 2 BHK ಮತ್ತು 1 BHK ಮನೆಗಳು ಬಾಡಿಗೆಗೆ ಇವೆ.
99645 99375

**HAPPY PEST MAN**
Termite Solution (ಗೆದ್ದಲು)
Cocroach Solution (ಜಿರಳೆ)
Rat Solution (ಇಲಿ, ನೊಣ, ಜೇಡ, ಸೊಳ್ಳೆ ಇತ್ಯಾದಿ)
# 286/285, Srinivasa Nilaya, 2nd Floor, Opp C.G. Hospital, P.J. Extension, Davagere-2.
ಸರ್ವೀಸ್ ಮಾಡಿಕೊಡಲಾಗುತ್ತದೆ
98445 55305

**SSLC/PUC ಪರೀಕ್ಷೆಯಲ್ಲಿ ಮತ್ತು ಅವಕಾಶ ವಂಚಿತ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ**
ದೂರ ಶಿಕ್ಷಣದ ಮುಖಾಂತರ ಆನ್‌ಲೈನ್ ಪರೀಕ್ಷೆ ಮುಖಾಂತರ ಉತ್ತಮ ಫಲಿತಾಂಶಕ್ಕಾಗಿ ಮುಂದಿನ ವಿದ್ಯಾಭ್ಯಾಸ ಮುಂದುವರಿಸಲು/ಸರ್ಕಾರಿ/ಖಾಸಗಿ ಉದ್ಯೋಗಾವಕಾಶ ಪಡೆಯಬಹುದಾದ ಕರ್ನಾಟಕ ಸರ್ಕಾರದ ಪ.ಪೂ. ಮಾರ್ಗಸೂಚಿ ಪಟ್ಟಿಯಲ್ಲಿ (ಸಿಬಿಎಸ್‌ಇ) ಅನುಮೋದಿತಕೊಂಡಿದೆ.
BOSSE-SIKKIM (ಪ್ರವೇಶ ಪ್ರಾರಂಭವಾಗಿದೆ)
SHREYAS CORRESPONDENCE COLLEGE,
DCM TownShip, Davangere.
97317 40827, 83107 47112, 97432 20274

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop
Davanagere.
89519 38228, 80502 22181

**Rent for Shed & Machinary Power**
L-11, Industrial Estate
Lokikere Road, Davangere
Man of Cattle Feed and
Fried gram Powder
K.P. Pramod, 7760677444


ನಗರ ದೇವತೆ ದುರ್ಗಾಂಬಿಕಾದೇವಿಗೆ ಮೋಹಿನಿ ಅಲಂಕಾರ


ಶ್ರೀ ಅನ್ನಪೂರ್ಣೇಶ್ವರಿ ದೇವಿಗೆ ಸರಸ್ವತಿ ಅಲಂಕಾರ


ನಿಜಲಿಂಗಪ್ಪ ಬಡಾವಣೆ ಶ್ರೀ ಶಾರದಾಂಬ ದೇವಿಗೆ ಮೋಹಿನಿ ಅಲಂಕಾರ


ಶ್ರೀ ತುಳಜಾ ಭವಾನಿ ಅಮ್ಮನವರಿಗೆ ತರಕಾರಿ ಅಲಂಕಾರ


ಶ್ರೀ ಕನ್ನಿಕಾಪರಮೇಶ್ವರಿ ದೇವಿಗೆ ಇಂದ್ರಾಣಿ ದೇವಿ ಅಲಂಕಾರ


ದಾವಲ್‌ಪೇಟೆ ಶ್ರೀ ಚೌಡೇಶ್ವರಿ ದೇವಿಗೆ ಮಹಾಗೌರಿ ಅಲಂಕಾರ



ಜಾಲಿನಗರ ಯಲ್ಲಮ್ಮದೇವಿಗೆ ಪುಷ್ಪಾಲಂಕಾರ


ಹೊಂಡದ ಸರ್ಕಲ್ ಕೊಲ್ಲಾಪುರ ಮಹಾಲಕ್ಷ್ಮಿದೇವಿಗೆ ಕುಂಕುಮ ಅಲಂಕಾರ



ಹಳೇಪೇಟೆ ಬನಶಂಕರಿ ದೇವಿಗೆ ಕಾಳಿಕಾದೇವಿ ಅಲಂಕಾರ


ವಿಜಯಲಕ್ಷ್ಮಿ ರಸ್ತೆ ಶ್ರೀ ಹಾಲು ಚೌಡಮ್ಮನವರಿಗೆ ಕಾತ್ಯಾಯಿನಿ ದೇವಿ ಅಲಂಕಾರ


ಒಕ್ಕಲಿಗರ ಪೇಟೆ ಶ್ರೀ ಚೌಡೇಶ್ವರಿ ಅಮ್ಮನವರಿಗೆ ಅಲಂಕಾರ


ವಿಶ್ವಕರ್ಮ ದೇವಸ್ಥಾನದ ಶ್ರೀ ಕಾಳಿಕಾದೇವಿಗೆ ಪುಷ್ಪಾಲಂಕಾರ



ಬಸವ ಬುದ್ಧ ಭೀಮ ನಗರ ಶ್ರೀ ರೇಣುಕಾ ಎಲ್ಲಮ್ಮ ದೇವಿಗೆ ತರಕಾರಿ ಅಲಂಕಾರ



ಕುಂಬಾರಪೇಟೆ ಶ್ರೀ ಬನ್ನಿ ಕಾಳಿಕಾಂಬ ದೇವಿಗೆ ಲಕ್ಷ್ಮಿ ಅಲಂಕಾರ


ಎಸ್ ಓ ಜಿ ಕಾಲೋನಿ ಶ್ರೀ ಚೌಡೇಶ್ವರಿ ದೇವಿಗೆ ನವರಾತ್ರಿ ಅಲಂಕಾರ


ಗಾಂಧಿನಗರದ ಹುಲುಗಮ್ಮ ದೇವಿಯ ಅಲಂಕಾರ


ಶಾಮನೂರಿನ ಶ್ರೀ ಮಂಗಳಗೌರಿ ದೇವಸ್ಥಾನದಲ್ಲಿ ಶ್ರೀ ದೇವಿಗೆ ದುರ್ಗಾಮಾತಾ ಅಲಂಕಾರ.


ವಿದ್ಯಾನಗರದ ಶಿವ - ಪಾರ್ವತಿ ದೇವಸ್ಥಾನದಲ್ಲಿ ಇಂದಿನ ಅಲಂಕಾರ


ಪಿ.ಜೆ. ಬಡಾವಣೆ ಶ್ರೀ ಬನ್ನಿಮಹಾಂಕಾಳಿ ದೇವಿ ಅಲಂಕಾರ


ನಗರದ ವೆಂಕಾಭೋವಿ ಕಾಲೋನಿಯ ಶ್ರೀ ಗಾಳಿ ದುರುಗಮ್ಮ ದೇವಿಗೆ ಸರಸ್ವತಿ ಪೂಜಾ ಅಲಂಕಾರ


ನಗರದ ಪಿಸಾಳೆ ಕಾಂಪೌಂಡ್ ಶ್ರೀದೇವಿಗೆ ಅಲಂಕಾರ


ಜಯದೇವ ವೃತ್ತ ಶ್ರೀ ಶಂಕರ ಮಠದ ಶ್ರೀ ಶಾರದಾ ದೇವಿಗೆ ಕಾತ್ಯಾಯಿನಿ ಅಲಂಕಾರ


ಗಾಂಧಿನಗರದ 5ನೇ ಕ್ರಾಸ್‌ನ ಶ್ರೀ ಹೊರಟ್ಟಿ ದುರ್ಗಾಂಬಿಕ ಮತ್ತು ಮರಿಯಮ್ಮ ದೇವಿಗೆ ಕಾತ್ಯಾಯಿನಿ ಅಲಂಕಾರ

# ಸಿಎಂ ಸ್ಥಾನದಲ್ಲಿ ಸಿದ್ದರಾಮಯ್ಯ ಮುಂದುವರಿಕೆ : ಸತೀಶ್ ಜಾರಕಿಹೊಳಿ



ಮೈಸೂರು, ಅ. 8 - ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರೆಯಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ತರುವ ಕುರಿತು ಹೈಕಮಾಂಡ್ ತಮ್ಮ ಜೊತೆಯಾಗಲೀ ಅಥವಾ ಪಕ್ಷದ ಇತರೆ ನಾಯಕರ ಜೊತೆಗಾಗಲೀ ಯಾವುದೇ ಚರ್ಚೆ ನಡೆಸಿಲ್ಲ ಎಂದು ಹಿರಿಯ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು 5 ವರ್ಷಗಳ ಪೂರ್ಣ ಅವಧಿಗೆ ಮುಂದುವರೆಯು ತ್ತಾರೆಯೇ ಎಂಬ ಬಗ್ಗೆ ಪಕ್ಷದ ಕೇಂದ್ರ ನಾಯಕತ್ವವೇ ಉತ್ತರಿಸಬೇಕು ಎಂದಿದ್ದಾರೆ.

ಸಿದ್ದರಾಮಯ್ಯ ಅವರು ಈಗ ಮುಖ್ಯಮಂತ್ರಿ ಆಗಿದ್ದಾರೆ ಹಾಗೂ ಅವರು ಆ ಸ್ಥಾನದಲ್ಲಿ ಮುಂದುವರೆಯಲಿದ್ದಾರೆ ಎಂದಷ್ಟೇ ನಾನು ಹೇಳಲು ಸಾಧ್ಯ. ಅವರು ಮೂರು ವರ್ಷ ಮುಖ್ಯಮಂತ್ರಿ ಆಗಿರುತ್ತಾರೋ ಅಥವಾ ಐದು ವರ್ಷ ಮುಖ್ಯಮಂತ್ರಿ ಆಗಿರು ತ್ತಾರೋ ಎಂದು ನನ್ನ ಹಂತದಲ್ಲಿ ನಿರ್ಧಾರ ಆಗುವುದಿಲ್ಲ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿ ಮುಂದುವರೆಯಲಿದ್ದಾರೆ ಹಾಗೂ ನಾವು ಅವರ ಜೊತೆ ಇದ್ದೇವೆ ಎಂದಷ್ಟೇ ಹೇಳಲು ಸಾಧ್ಯ ಎಂದಿದ್ದಾರೆ.

ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ತರುವ ಬಗ್ಗೆ ಹೈಕಮಾಂಡ್ ನಿಮ್ಮ ಜೊತೆ ಚರ್ಚೆ ನಡೆಸಿದೆಯೇ ? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಈ ಬಗ್ಗೆ ನನ್ನ ಜೊತೆ ಹೈಕಮಾಂಡ್ ಚರ್ಚೆ ನಡೆಸಿಲ್ಲ. ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿ ಮುಂದುವರೆಯಲಿದ್ದಾರೆ ಎಂದಷ್ಟೇ ನಾನು ಹೇಳಬಲ್ಲೆ ಎಂದು ತಿಳಿಸಿದರು.

ರಾಜಕೀಯ ಬೆಳವಣಿಗೆಗಳ ನಡುವೆಯೇ ಜಾರಕಿಹೊಳಿ ಅವರು ಗೃಹ ಸಚಿವ ಜಿ. ಪರಮೇಶ್ವರ್ ಹಾಗೂ ಸಮಾಜ ಕಲ್ಯಾಣ ಸಚಿವ ಹೆಚ್.ಸಿ. ಮಹಾದೇವಪ್ಪ ಅವರ ಜೊತೆ ಚರ್ಚೆ ನಡೆಸಿದ್ದರು. ದಲಿತರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂಬ ಬೇಡಿಕೆಯ ಹಿನ್ನೆಲೆಯಲ್ಲಿ ಈ ಭೇಟಿ ರಾಜಕೀಯ ಚರ್ಚೆಗೆ ಕಾರಣವಾಗಿತ್ತು.

ಆದರೆ, ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. ಹೀಗಿರುವಾಗ ನಾನು ಆ ಸ್ಥಾನಕ್ಕೆ ಸ್ಪರ್ಧೆ ನಡೆಸುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಜಾರಕಿಹೊಳಿ ಹೇಳಿದರು.

ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರೆಯಲಿದ್ದಾರೆ ಎಂದು ನಾನು, ಇತರೆ ಸಚಿವರು, ನಮ್ಮ ಪಕ್ಷ ಹಾಗೂ ಹೈಕಮಾಂಡ್ ಹಲವು ಬಾರಿ ತಿಳಿಸಿದ್ದೇವೆ. ಬದಲಾವಣೆ ಕುರಿತ ಚರ್ಚೆ ಅಪ್ರಸ್ತುತ ಎಂದವರು ಹೇಳಿದರು.

ಮಹದೇವಪ್ಪ ಹಾಗೂ ಪರಮೇಶ್ವರ್ ಅವರ ಜೊತೆಗಿನ ಭೇಟಿಗೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ ಎಂದು ಹೇಳಿದ ಜಾರಕಿಹೊಳಿ, ಮಹದೇವಪ್ಪ ಅವರ ಮನೆ ಬೆಂಗಳೂರಿನಲ್ಲಿ ನಮ್ಮ ಮನೆಯ ಪಕ್ಕದಲ್ಲಿ ಇದೆ. ಈ ಹಿಂದೆಯೂ ಸಾಮಾನ್ಯ ಭೇಟಿ ಮಾಡುತ್ತಿದ್ದೆವು, ಆಗ ಮಾಧ್ಯಮದವರು ಗಮನಿಸಿರಲಿಲ್ಲ ಎಂದು ಹೇಳಿದರು.

ಈ ನಡುವೆ ಕಾಂಗ್ರೆಸ್ ಪಕ್ಷದಲ್ಲಿ ಆಗುತ್ತಿರುವ ಬೆಳವಣಿಗೆಗಳ ಬಗ್ಗೆ ಲೇವಡಿ ಮಾಡಿರುವ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಆರ್.ಅಶೋಕ್, ಕಾಂಗ್ರೆಸ್ ಪಕ್ಷದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಸ್ಪರ್ಧೆ ನಡೆಯುತ್ತಿದೆ. ಮುಖ್ಯಮಂತ್ರಿ ಸ್ಥಾನಕ್ಕಾಗಿ ಸಚಿವರು ಸಭೆಗಳನ್ನು ನಡೆಸುತ್ತಿದ್ದಾರೆ ಎಂದು ಹೇಳಿದರು.

10-15 ದಿನಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡುವ ಸಾಧ್ಯತೆ ಇದೆ ಎಂಬ ಸುದ್ದಿಗಳು ಕಾಂಗ್ರೆಸ್ ಪಕ್ಷದಲ್ಲಿ ಹರಡಿವೆ. ಹೀಗಾಗಿ ನಾಯಕರು ತಮಗೆ ಬೆಂಬಲಿಸುವ ಶಾಸಕರ ಎಣಿಕೆಯಲ್ಲಿ ತೊಡಗಿದ್ದಾರೆ ಎಂದು ಅಶೋಕ್ ಹೇಳಿದ್ದಾರೆ.

# ಕುವೆಂಪು ವಿವಿಗೆ ಸಂತೆಬೆನ್ನೂರು ಫೈಜ್ನಟ್ರಾಜ್ ಕಥೆ ಪಠ್ಯವಾಗಿ ಆಯ್ಕೆ



ದಾವಣಗೆರೆ,ಅ. 8 - ಕುವೆಂಪು ವಿಶ್ವವಿದ್ಯಾಲಯಕ್ಕೆ ಸಂತೆಬೆನ್ನೂರು ಫೈಜ್ನಟ್ರಾಜ್ ಅವರ ಸಣ್ಣಕಥೆಯೊಂದು 2024-25 ನೇ ಸಾಲಿನ ಶೈಕ್ಷಣಿಕ ವರ್ಷದ ಪಠ್ಯವಾಗಿ ಆಯ್ಕೆಯಾಗಿದೆ.

ಪದವಿ ಕಾಲೇಜು ಅಧ್ಯಾಪಕರ ವೇದಿಕೆ ಮತ್ತು ಕುವೆಂಪು ವಿಶ್ವ ವಿದ್ಯಾಲಯ- ಪಠ್ಯ ಪುಸ್ತಕ ಮಾಲೆ ಯೋಜನೆಯ ಅಡಿಯಲ್ಲಿ ಪ್ರಧಾನ ಸಂಪಾದಕ ಪ್ರೊ. ಶಿವಾನಂದ ಕೆಳಗಿನಮನಿ ನೇತೃತ್ವದಲ್ಲಿ ವಿವಿಧ ಸೆಮಿಸ್ಟ್‌ರಗೆ ಪಠ್ಯಗಳನ್ನು ಆರಿಸಿದೆ.

ಸಂತೆಬೆನ್ನೂರು ಫೈಜ್ನಟ್ರಾಜ್ ಅವರ ಈಗಾಗಲೇ ಬಿಡುಗಡೆ ಹೊಂದಿ ಜನಪ್ರಿಯ ಆಗಿರುವ 'ಹಬ್ಬಿದಾ ಮಲೆ ಮಧ್ಯದೊಳಗೆ' ಕಥಾ ಸಂಕಲನದ ಒಂದು ಕಥೆ ' ಇಪ್ಪತ್ತು ರುಪಾಯಿ' ಗಣಕಸಿರಿ-1 ಬಿ.ಸಿ.ಎ ಪ್ರಥಮ ಸೆಮಿಸ್ಟರ್ ಕನ್ನಡ ಭಾಷೆ ಪಠ್ಯಕ್ಕೆ ನಿಗದಿಪಡಿಸಲಾಗಿದೆ ಎಂದು ಸಂಪಾದಕ ಪ್ರೊ. ಎಚ್.ಎಸ್. ರಘುನಾಥ್ ಮತ್ತು ಡಾ. ಪ್ರವೀಣ್ ಚಂದ್ರ ತಿಳಿಸಿದ್ದಾರೆ.

ವೃದ್ಧಾಪ್ಯದ ಬದುಕು ಕೆಲವು ಜೀವಗಳಿಗೆ ಎಷ್ಟು ಘೋರ ಮತ್ತು ಭಾರ ಎಂಬುದನ್ನು ಈ ಕಥೆ ಸಾರುತ್ತದೆ. ಇಂದಿನ ಯುವ ಜನಾಂಗ ಹೆತ್ತವರ ಬಗ್ಗೆ ಇಟ್ಟುಕೊಳ್ಳಬಹುದಾದ ಮಾನವೀಯ ಅಂತಃಕರಣ ಕಲಿಕೆಗೆ ಇಂತಹ ಪಠ್ಯ ಸಹಕಾರಿ ಎಂದು ಪ್ರಧಾನ ಸಂಪಾದಕರು ಅಭಿಪ್ರಾಯ ಪಟ್ಟಿದ್ದಾರೆ.

ಈಗಾಗಲೇ ಸಂತೆಬೆನ್ನೂರು ಫೈಜ್ನಟ್ರಾಜ್ ಅವರ ಒಂದು ಮಕ್ಕಳ ಕತೆ ಮಹಾರಾಷ್ಟ್ರದ ಪಠ್ಯ ಪುಸ್ತಕದಲ್ಲಿ ಮತ್ತು ದಾವಣಗೆರೆ ವಿಶ್ವ ವಿದ್ಯಾಲಯದ ಎರಡನೇ ಬಿಸಿಎ ಕನ್ನಡ ಪಠ್ಯ ಪುಸ್ತಕದಲ್ಲೂ ಕವಿತೆಯೊಂದು ಪಠ್ಯವಾಗಿದೆ.

# ಜಗಳೂರು : ಬೆಸ್ಕಾಂನಿಂದ ಉಚಿತ ಡಿಜಿಟಲ್ ಮೀಟರ್ ಅಳವಡಿಕೆ

ಜಗಳೂರು, ಅ. 8 - ಜಗಳೂರು ಬೆಸ್ಕಾಂ ಉಪವಿಭಾಗದ ವ್ಯಾಪ್ತಿಯಲ್ಲಿ ಹಳೇ ವಿದ್ಯುತ್ ಮೀಟರ್‌ಗಳನ್ನು ತೆಗೆದು ಉಚಿತವಾಗಿ ಹೊಸ ಡಿಜಿಟಲ್ ಮೀಟರ್‌ಗಳನ್ನು ಅಳವಡಿಸಲಾಗುತ್ತಿದ್ದು, ಬೆಸ್ಕಾಂ ಗ್ರಾಹಕರ ಬಳಿ ಹಳೆ ಮಾಪಕ ಎಲೆಕ್ಟ್ರೋ ಮೆಕ್ಯಾನಿಲ್ ಬದಲಾಗಿ ಎಲೆಕ್ಟ್ರೋ ಸ್ಟ್ಯಾಟಿಕ್ ಡಿಜಿಟಲ್ ಮಾಪಕ ಅಳವಡಿಸಿಕೊಳ್ಳಲು ಬೆಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದ್ದಾರೆ.

# ಅಂಗನವಾಡಿ : ನೇಮಕಾತಿ ಅಧಿಸೂಚನೆ ರದ್ದು

ಚನ್ನಗಿರಿ, ಅ. 8 - ಚನ್ನಗಿರಿ ತಾಲ್ಲೂಕಿನಲ್ಲಿ ಖಾಲಿ ಇದ್ದ 16 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 52 ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದ್ದು ಇದನ್ನು ರದ್ದುಪಡಿಸಲಾಗಿದೆ. ಮುಂದೆ ನಡೆಯುವ ನೇಮಕಾತಿ ಬಗ್ಗೆ ದಿನಾಂಕವನ್ನು ತಿಳಿಸಲಾಗುತ್ತದೆ ಎಂದು ಮಹಿಳಾ - ಮಕ್ಕಳ ಅಭಿವೃದ್ಧಿ ಅಧಿಕಾರಿ ರಾಜಾನಾಯ್ಕ್ ತಿಳಿಸಿದ್ದಾರೆ.

# ಅನುಮತಿ ಪಡೆಯದೇ ಸಿಮೆಂಟ್ ರಸ್ತೆ ಕಟ್ ಪ್ರಕರಣ



## ನಾಲ್ವರ ವಿರುದ್ಧ ಎಫ್.ಐ.ಆರ್. ದಾಖಲು

ದಾವಣಗೆರೆ, ಅ.8- ನಗರದ ಎವಿಕೆ ಕಾಲೇಜು ರಸ್ತೆಯಲ್ಲಿ ಇದೇ ದಿನಾಂಕ 2 ರಂದು ರಾತ್ರಿ ವೇಳೆಯಲ್ಲಿ ಪೊಲೀಸ್ ಬ್ಯಾರಿಕೇಡ್‌ಗಳನ್ನು ರಸ್ತೆಗೆ ಅಡ್ಡಲಾಗಿ ಹಾಕಿ ಸಿಮೆಂಟ್ ರಸ್ತೆ ಕಟ್ ಮಾಡುತ್ತಿದ್ದರು ಎಂದು ಆರೋಪಿಸಿ ಸಾಮಾಜಿಕ ಕಾರ್ಯಕರ್ತ ಶ್ರೀಕಾಂತ್ ನೀಡಿದ್ದ ದೂರಿನನ್ವಯ ಬಡಾವಣೆ ಪೊಲೀಸ್ ಠಾಣೆಯಲ್ಲಿ ಎಫ್ ಐ ಆರ್ ದಾಖಲಾಗಿದೆ.

ಜೆಸಿಬಿ ಡ್ರೈವರ್, ಬಸ್ ಶೆಲ್ಟರ್ ನಿರ್ಮಾಣಕ್ಕೆ ಸಂಬಂಧಿಸಿದ ಸ್ಮಾರ್ಟ್ ಸಿಟಿಯ ಅಧಿಕಾರಿಗಳು, ವಾರ್ಡ್ ಗೆ ಸಂಬಂಧಿಸಿದ ಮಹಾನಗರ ಪಾಲಿಕೆ ಅಧಿಕಾರಿಗಳು ಸೇರಿದಂತೆ ಗುತ್ತಿಗೆದಾರರ ವಿರುದ್ಧ ಪ್ರಕರಣ ದಾಖಲಾಗಿದೆ.

**ಪ್ರಕರಣದ ಹಿನ್ನೆಲೆ :** ರಸ್ತೆ ಕಟ್ ಮಾಡುವ ವಿಚಾರ ತಿಳಿದ ಸಾಮಾಜಿಕ ಕಾರ್ಯಕರ್ತರು ಸ್ಥಳಕ್ಕೆ ಭೇಟಿ ನೀಡಿದ್ದರು. ಇದು ಸ್ಮಾರ್ಟ್ ಸಿಟಿ ಬಸ್ ನಿಲ್ದಾಣಕ್ಕೆ ವಿದ್ಯುತ್ ಸಂಪರ್ಕವನ್ನು ನೀಡಲು ಕೇಬಲ್ ಹಾಕುವ ಸಲುವಾಗಿ ರಸ್ತೆ ಕಟ್ ಮಾಡುತ್ತಿದ್ದೇವೆ ಎಂದು ಜೆಸಿಬಿ ಚಾಲಕ ತಿಳಿಸಿದ್ದಾರೆ. ಸಾಮಾಜಿಕ ಕಾರ್ಯಕರ್ತ ಎಂ. ಜಿ. ಶ್ರೀಕಾಂತ್ ಅಲ್ಲೆ ಸಮೀಪದಲ್ಲಿ ಸರ್ವೀಸ್ ಗ್ಯಾಪ್ ಇದ್ದರೂ ಸಹ ಯಾಕೆ ರಸ್ತೆ ಅಗೆತ ಎಂದು ರಸ್ತೆ ಕಟಾವು ಮಾಡಲು ಬಂದವರನ್ನು ಪ್ರಶ್ನಿಸಿದ್ದಾರೆ. ಈ ಬಗ್ಗೆ ಸ್ಮಾರ್ಟ್ ಸಿಟಿ ಎಂ.ಡಿ. ಅವರಿಗೆ ಕರೆ ಮಾಡಿದಾಗ ಕೆಲಸವನ್ನು ನಿಲ್ಲಿಸಲು ಕಾರ್ಮಿಕರಿಗೆ ಸೂಚಿಸಿದರಂತೆ.

ರಸ್ತೆ ಬಂದ್ ಮಾಡಲು ಪೊಲೀಸ್ ಅನುಮತಿ ಪಡೆಯದೇ ಹಾಗೂ ರಸ್ತೆ ಅಗೆತ ಮಾಡಲು ಪಾಲಿಕೆಯಿಂದ ಅನುಮತಿಯನ್ನೂ ಪಡೆಯದೇ ಕೆಲಸ ಮಾಡುತ್ತಿದ್ದರು ಎಂದು ತಿಳಿದು ಬಂದಿದೆ.

# ಎರಡ್ರೂಪಾಯಿ ಡಾಕ್ಟರ್ ಡಾ. ಬಸವಂತಪ್ಪ ಇನ್ನಿಲ್ಲ

ದಾವಣಗೆರೆ, ಅ.8- ಎರಡ್ರೂಪಾಯಿ ಡಾಕ್ಟರ್ ಎಂದೇ ಪ್ರಸಿದ್ಧರಾಗಿದ್ದ ಚನ್ನಗಿರಿ ತಾಲ್ಲೂಕಿನ ಹೊನ್ನೆಮರದಹಳ್ಳಿ ಗ್ರಾಮದವರಾದ ಹಿರಿಯ ವೈದ್ಯರೂ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ ಆದ ಡಾ. ಎಂ.ಬಸವಂತಪ್ಪ ಅವರು ಇಂದು ಸಂಜೆ 7.30ಕ್ಕೆ ನಿಧನರಾದರು.

ಮೃತರಿಗೆ ಸುಮಾರು 73 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ನಾಳೆ ದಿನಾಂಕ 9ರ ಬುಧವಾರ ಮಧ್ಯಾಹ್ನ3 ಗಂಟೆಗೆ ಹೊನ್ನೆಮರದಹಳ್ಳಿಯಲ್ಲಿರುವ ಅವರ ಸ್ವಂತ ತೋಟದಲ್ಲಿ ನಡೆಯಲಿದೆ.

**ಸಂಕ್ಷಿಪ್ತ ಪರಿಚಯ :** ಹೊನ್ನೆಮರದಹಳ್ಳಿ ಗ್ರಾಮದ ಮಲ್ಲಜ್ಜರ ಸಿದ್ದಪ್ಪ ಮತ್ತು ಶ್ರೀಮತಿ ಹಾಲಮ್ಮ ದಂಪತಿ ಪುತ್ರರಾಗಿ 1951ರಲ್ಲಿ ಜನಿಸಿದ್ದ ಡಾ. ಬಸವಂತಪ್ಪ, ಹೊನ್ನೆಮರದಹಳ್ಳಿ ಮತ್ತು ನೀತಿಗೆರೆ ಗ್ರಾಮಗಳಲ್ಲಿ ಪ್ರಾಥಮಿಕ ಶಿಕ್ಷಣ, ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಪ್ರೌಢ ಶಾಲೆಯಲ್ಲಿ ಪ್ರೌಢಶಿಕ್ಷಣ, ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಪದವಿ ಪೂರ್ವ ಶಿಕ್ಷಣ, ಮೈಸೂರಿನಲ್ಲಿ ವೈದ್ಯಕೀಯ ಪದವಿಯನ್ನು ಪೂರೈಸಿದ್ದರು.

ತಂದೆಯ ಮಾತಿನಂತೆ ಸರ್ಕಾರಿ ಸೇವೆಗೆ ಹೋಗದೇ ಗ್ರಾಮೀಣ ಜನರಿಗೆ ಆರೋಗ್ಯ ಅರಿವು ಮೂಡಿಸಲು ನಿರ್ಧಾರ ಕೈಗೊಂಡ ಡಾ. ಬಸವಂತಪ್ಪ, ಸಂತೇಬೆನ್ನೂರಿನಲ್ಲಿ ಸಿದ್ದೇಶ್ವರ ಕ್ಲಿನಿಕ್ ಆರಂಭಿಸಿ, ಕಳೆದ 40 ವರ್ಷಗಳಿಂದ ನಲವತ್ತೈವತ್ತು ಹಳ್ಳಿಗಳ ಬಡ ಜನರಿಗೆ ಅತೀ ಕಡಿಮೆ 2 ರೂ. ಶುಲ್ಕದೊಂದಿಗೆ ಚಿಕಿತ್ಸೆ ನೀಡುವುದರ ಮೂಲಕ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಚಿರಪರಿಚಿತರಾಗಿದ್ದರು.



**ವೈದ್ಯಕೀಯ ಕ್ಷೇತ್ರದಲ್ಲಿನ ಅನುಪಮ ಸೇವೆಗೆ ಡಾ. ಬಸವಂತಪ್ಪ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದ್ದ ಕರ್ನಾಟಕ ಸರ್ಕಾರ**

ಹೊನ್ನೆಮರದಹಳ್ಳಿಯಲ್ಲಿರುವ ತಮ್ಮ 3 ಎಕರೆ ತೋಟದಿಂದ ಬರುವ ಆದಾಯವೇ ಮೂಲವಾಗಿದೆ. ವೈದ್ಯಕೀಯ ಸೇವೆಯನ್ನು ಬಡವರಿಗಾಗಿ ಮೀಸಲಿರಿಸಿದ್ದ ಅವರು, ಬಡವರ ಪಾಲಿನ ಆರೋಗ್ಯ ದೈವವಾಗಿದ್ದರು. ಡಾ. ಬಸವಂತಪ್ಪ ಅವರು ತಮ್ಮ ಮಗನನ್ನು ವೈದ್ಯನನ್ನಾಗಿ ಮಾಡುವ ಕನಸಿದ್ದರೂ ಅಷ್ಟೊಂದು ಶುಲ್ಕ ಕಟ್ಟಲು ಹಣವಿಲ್ಲದ ಕಾರಣಕ್ಕೆ ಇಂಜಿನಿಯರಿಂಗ್ ಓದಿಸಿದರು. ಮಗಳನ್ನು ಪದವಿವರೆಗೆ ಓದಿಸಿದ್ದರು.

'ಸಾಧನೆ ಇಲ್ಲದೇ ಸತ್ತರೆ ಸಾವಿಗೇ ಅವಮಾನ, ಆದರ್ಶವಿಲ್ಲದೇ ಸತ್ತರೆ ಬದುಕಿಗೇ ಅವಮಾನ' ಎಂಬಂತೆ ಸದಾ ರೋಗಿಗಳ ಆರೈಕೆಯಲ್ಲೇ ತಮ್ಮನ್ನು ತೊಡಗಿಸಿಕೊಂಡಿದ್ದ ಡಾ. ಬಸವಂತಪ್ಪ, ಪ್ರತಿದಿನ ಸೂರ್ಯೋದಯದ ಕಾಲಕ್ಕೆ ಪ್ರಾರಂಭವಾಗುತ್ತಿದ್ದ ಕ್ಲಿನಿಕ್‌ಗೆ ರಾತ್ರಿ 10ರವರೆಗೂ ಬರುವ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದರು. ಕೋವಿಡ್ ಮಹಾಮಾರಿ ಆವರಿಸಿದ ಸಂದರ್ಭದಲ್ಲೂ ಹಗಲು - ರಾತ್ರಿ ನಿರಂತರವಾಗಿ ಸೇವೆ ಸಲ್ಲಿಸಿದ ಕೀರ್ತಿ ಇವರದು.

ಸರಳ - ಸಜ್ಜನಿಕೆಗೆ ಮತ್ತೊಂದು ಹೆಸರಾಗಿದ್ದ ಡಾ. ಬಸವಂತಪ್ಪ ಅವರ ವೈದ್ಯಕೀಯ ಕ್ಷೇತ್ರದಲ್ಲಿನ ಅನುಪಮ ಸೇವೆಯನ್ನು ಪರಿಗಣಿಸಿ ಕರ್ನಾಟಕ ಸರ್ಕಾರವು 2022ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತ್ತು. ಈ ಪ್ರಶಸ್ತಿ ತಮಗೆ ಸಂದ ಸಂದರ್ಭದಲ್ಲಿ ಪ್ರತಿಕ್ರಿಯೆ ನೀಡಿದ್ದ ಬಸವಂತಪ್ಪ, ಪತ್ನಿ ಸುಜಾತ ಅವರ ಸಹಕಾರ ಅನನ್ಯ ಎಂದು ಭಾವುಕರಾಗಿ ನುಡಿದಿದ್ದರು.

# ಹರಿಯಾಣದಲ್ಲಿ ಬಿಜೆಪಿ ಹ್ಯಾಟ್ರಿಕ್ ಜಯಭೇರಿ : ಸಂಭ್ರಮಾಚರಣೆ



ದಾವಣಗೆರೆ, ಅ.8- ಹರಿಯಾಣದಲ್ಲಿ ಬಿಜೆಪಿ ಹ್ಯಾಟ್ರಿಕ್ ಜಯಭೇರಿ ಭಾರಿಸಿದ ಹಿನ್ನೆಲೆಯಲ್ಲಿ ಜಿಲ್ಲಾ ಬಿಜೆಪಿ ಕಾರ್ಯಾಲಯದ ಮುಂದೆ ಇಂದು ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ಸಂಭ್ರಮಾಚರಿಸಲಾಯಿತು.

ವಿಧಾನ ಪರಿಷತ್ ಸದಸ್ಯ ಧನಂಜಯ್ ಸರ್ಜಿ, ಮಾಜಿ ಸಚಿವ ಎಸ್. ಎ. ರವೀಂದ್ರನಾಥ್, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ॥ ಎ.ಹೆಚ್. ಶಿವಯೋಗಿ ಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್ ನಾಗಪ್ಪ, ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್, ಪ್ರಧಾನ ಕಾರ್ಯದರ್ಶಿಗಳಾದ ಧನಂಜಯ ಕಡ್ಲೇಬಾಳು, ಅಣ್ಣೇಶ್, ಅಭಿಯಾನದ ಸಂಚಾಲಕ ಮುಕುಂದಪ್ಪ, ಹಾವೇರಿ ಉಸ್ತುವಾರಿ ಎಲ್. ಎನ್. ಕಲ್ಲೇಶ್, ಬಿಜೆಪಿ ವಕ್ತಾರ ಬಿ.ಎಂ. ಸತೀಶ್ ಮತ್ತು ಇತರರು ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡಿದ್ದರು.

# 'ಯುಬಿಡಿಟಿ ಉಳಿಸಿ'ಹೋರಾಟ: ದಾವಣಗೆರೆ ಬಂದ್ ಪ್ರಚಾರಕ್ಕೆ ಚಾಲನೆ

ದಾವಣಗೆರೆ, ಅ.8- ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶೇ.50 ರಷ್ಟು ಸೀಟುಗಳನ್ನು ಪೇಮೆಂಟಿಗೆ ಮಾರಾಟ ಮಾಡುತ್ತಿರುವುದರ ವಿರುದ್ಧ ಇದೇ ದಿನಾಂಕ 16 ರಂದು ನಡೆಸಲುದ್ದೇಶಿಸಿರುವ ದಾವಣಗೆರೆ ಬಂದ್ ನ ಪ್ರಚಾರಕ್ಕೆ ಎಐಡಿಎಸ್‌ಓ ಅಖಿಲ ಭಾರತ ಅಧ್ಯಕ್ಷ ವಿ.ಎನ್. ರಾಜಶೇಖರ್ ಅವರು ಇಂದು ಚಾಲನೆ ನೀಡಿದರು.

ಸ್ವಯಂ ಪ್ರೇರಿತ ದಾವಣಗೆರೆ ಬಂದ್‌ನ ಭಿತ್ತಿ ಪತ್ರವನ್ನು ಗೋಡೆಗೆ ಅಂಟಿಸುವುದರ ಮುಖಾಂತರ ಬಂದ್ ಪ್ರಚಾರಕ್ಕೆ ಅಧಿಕೃತ ಚಾಲನೆ ನೀಡಿದರು.

ಇದೇ ವೇಳೆ ಯುಬಿಡಿಟಿ ಉಳಿಸಿ ಹೋರಾಟ ಸಮಿತಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಕಾಲೇಜಿನಲ್ಲಿ ಮಾತನಾಡಿದ ಅವರು, ರಾಜ್ಯದ ಬಡ ರೈತ, ಕಾರ್ಮಿಕರ ಮಕ್ಕಳು ಇಂಜಿನಿಯರಿಂಗ್ ಶಿಕ್ಷಣ ಪಡೆಯಬೇಕೆಂಬ ಮಹದಾಸೆಯೊಂದಿಗೆ ಬರುತ್ತಾರೆ ದಾವಣಗೆರೆಯ



ದಾನಿಗಳು ಕಾಲೇ ಜಿಗೆ ದಾನ ನೀಡಿದ್ದಾರೆ. ಆದರೆ ಏಳು ದಶಕಗಳನ್ನು ಪೂರೈಸಿ, ಅಮೃತ ಮಹೋತ್ಸವದ ಹೊಸ್ತಿಲಲ್ಲಿರುವ ಯುಬಿಡಿಟಿ ಯನ್ನು ಸರ್ಕಾರ ಮಾರಲು ಹೊರಟಿದೆ ಎಂದರು.

ಕಾನೂನು ಬಾಹಿರವಾಗಿ, ಅತ್ಯಂತ ನಯವಂಚಕತನದಿಂದ ಈ ಸರ್ಕಾರಿ ಕಾಲೇಜಿನಲ್ಲಿ ಪೇಮೆಂಟ್ ಕೋಟಾ ಜಾರಿಗೊಳಿಸಲಾಗಿದೆ. ಬಡ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣದಿಂದ ದೂರ ತಳ್ಳುವ ಸರ್ಕಾರದ ದುರುಳ ನೀತಿಯ ವಿರುದ್ಧ ಒಗ್ಗಟ್ಟಾಗಿ ನಿಂತು ಹೋರಾಟ ಮಾಡುತ್ತಿರುವ ಯುಬಿಡಿಟಿ ಕಾಲೇಜಿನ ವಿದ್ಯಾರ್ಥಿಗಳ ಹೋರಾಟ ಇತಿಹಾಸದ ಪುಟಗಳಲ್ಲಿ ದಾಖಲಾಗುತ್ತದೆ ಎಂದು ಹೇಳಿದರು.

ದಾವಣಗೆರೆ ಸೇರಿದಂತೆ ನಾಡಿನ ಗಣ್ಯರು, ಸಾಹಿತಿಗಳು, ಶಿಕ್ಷಣ ಪ್ರೇಮಿಗಳು ಹಾಗೂ ಎಲ್ಲಾ ಸಾಮಾನ್ಯ ಜನತೆಯ ಬೆಂಬಲವಿದೆ.

ನಿಸ್ವಾರ್ಥ ಮನೋಭಾವದಿಂದ ಈ ಮಹಾನ್ ಸಂಸ್ಥೆಯನ್ನು ಉಳಿಸಲು ಹೋರಾಟ ಮಾಡುತ್ತಿರುವ ವಿದ್ಯಾರ್ಥಿಗಳ ನಡೆ ಶ್ಲಾಘನೀಯ ಎಂದು ಅಭಿನಂದಿಸಿದರು.

ನಂತರ ವಿದ್ಯಾರ್ಥಿಗಳ ವಿವಿಧ ತಂಡಗಳನ್ನು ರಚಿಸಿ ನಗರದಾದ್ಯಂತ ಪ್ರಚಾರಕ್ಕೆ ಯೋಜನೆ ರೂಪಿಸಲಾಯಿತು.

ಎಐಡಿಎಸ್‌ಓನ ರಾಜ್ಯ ಕಚೇರಿ ಕಾರ್ಯದರ್ಶಿ ಮಹಾಂತೇಶ್ ಬಿಳೂರು, ಜಿಲ್ಲಾಧ್ಯಕ್ಷೆ ಪೂಜಾ ನಂದಿಹಳ್ಳಿ, ಜಿಲ್ಲಾ ಕಾರ್ಯದರ್ಶಿ ಸುಮನ್ ಟಿ.ಎಸ್, ಯುಬಿಡಿಟಿ ಉಳಿಸಿ ಹೋರಾಟ ಸಮಿತಿ ಸದಸ್ಯರಾದ ಅಖಿಲೇಶ್, ನಿಖಿಲ್ ಆದರ್ಶ್, ಗೌತಮ್, ಅಭಿಷೇಕ್, ಚಂದನಾ, ಮೇಘನಾ, ರೋಹಿತ್, ಜೀವನ್, ಯೋಗೇಶ್, ಸಂತೋಷ್ ಚೇತನ್ ಸೇರದಂತೆ ಎಲ್ಲಾ ಶಾಖೆಯ ವಿದ್ಯಾರ್ಥಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.







## ತಿರುಪತಿಯ ಬ್ರಹ್ಮೋತ್ಸವದಲ್ಲಿ ನಮನ ಅಕಾಡೆಮಿ

ದಾವಣಗೆರೆ, ಅ.8- ತಿರುಪತಿಯಲ್ಲಿ ನಿನ್ನೆ ಏರ್ಪಾಡಾಗಿದ್ದ ಬ್ರಹ್ಮೋತ್ಸವ ಕಾರ್ಯಕ್ರಮದಲ್ಲಿ ನಮನ ಅಕಾಡೆಮಿಯ ಗುರುಗಳಾದ ವಿದುಷಿ ಶ್ರೀಮತಿ ಡಿ.ಕೆ. ಮಾಧವಿ ಹಾಗೂ 20 ಶಿಷ್ಯಂದಿರು ಪಾಲ್ಗೊಂಡು, ಬೆಳಗಿನ ಮೆರವಣಿಗೆಯಲ್ಲಿ ಶಾಸ್ತ್ರೀಯ ನೃತ್ಯ ಹಾಗೂ ಸಂಜೆಯ ಮೆರವಣಿಗೆಯಲ್ಲಿ ದಾಂಡಿಯ (ಕೋಲಾಟ) ನೃತ್ಯ ಪ್ರದರ್ಶನ ಮಾಡಿ ಭಕ್ತರ ಗಮನ ಸೆಳೆದರು.

## ಮೈನವಿರೇಳಿಸಿದ ಮಲ್ಲಗಂಬ ಪ್ರದರ್ಶನ



**ಕುಂದೂರು**

ಹೊನ್ನಾಳಿ, ಅ.8- ತಾಲ್ಲೂಕಿನ ಕುಂದೂರು ಗ್ರಾಮದ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಶರನ್ನವರಾತ್ರಿ ಮಹೋತ್ಸವದ ಅಂಗವಾಗಿ ಧಾರ್ಮಿಕ ಮತ್ತು ಮನೋರಂಜನಾ ಕಾರ್ಯಕ್ರಮಗಳು ವಿಜೃಂಭಣೆಯಿಂದ ನಡೆಯುತ್ತಿವೆ.

ಮಹೋತ್ಸವದ 5ನೇ ದಿನದಂದು ಧಾರವಾಡ ಜಿಲ್ಲೆಯ ಸಿರಗುಪ್ಪಿಯ ರಾಜು ಶಿವನಗೌಡರ್ ಮತ್ತು ಶಿವಯೋಗಿ ಇವರ ತಂಡದಿಂದ ಮಲ್ಲಗಂಬ ಪ್ರದರ್ಶನ ಆಕರ್ಷಕವಾಗಿ ನಡೆಯಿತು.

ನಿರ್ದಿಷ್ಟ ಅಡಿಯ ಮರದ ಕಂಬದ ಮೇಲೆ ಮಲ್ಲಗಂಬದ ವಿವಿಧ ಪಟ್ಟುಗಳನ್ನು ಹಾಕಿದರು, ಹಗ್ಗದ ಸಹಾಯದಿಂದ ವಿವಿಧ ಬಗೆಯ ಯೋಗಾಸನದ ಭಂಗಿಗಳನ್ನು ಪ್ರದರ್ಶಿಸಿ ಮೈನವಿರೇಳಿಸುವಂತೆ ಮಾಡಿದರು.

ಈ ವೇಳೆ ದೇವಾಲಯದ ಅಧ್ಯಕ್ಷರು, ಸದಸ್ಯರು, ಉತ್ಸವ ಸಮಿತಿಯ ಅಧ್ಯಕ್ಷರು, ಪದಾಧಿಕಾರಿಗಳು, ಗ್ರಾಮದ ಮುಖಂಡ ವಿಕ್ರಮ್ ಪಾಟೀಲ್, ಗ್ರಾ. ಪಂ. ಸದಸ್ಯರಾದ ಪ್ರಸನ್ನಕುಮಾರ್, ಧನಂಜಯ ಮತ್ತು ವೀರಣ್ಣಗೌಡ, ಸಿದ್ದೇಶ್, ಬಸವರಾಜ್, ಅನಿಲ್ ನಾಡಿಗ್, ಸುರೋಳ್ ಪ್ರಸನ್ನ ಮತ್ತು ಇತರರಿದ್ದರು.

## ಕಟ್ಟಡ ಪರವಾನಗಿ ಪಡೆಯಲು ಸೂಚನೆ

ದಾವಣಗೆರೆ, ಅ.8- ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಪರವಾನಗಿ ಪಡೆಯದೇ ಕಟ್ಟಡ ನಿರ್ಮಾಣವಾಗುತ್ತಿರುವುದು ಕಂಡು ಬಂದಿದ್ದು ಅನಧಿಕೃತ, ಅಕ್ರಮ ಕಟ್ಟಡ ನಿರ್ಮಾಣ ಕಾಮಗಾರಿ ಕಂಡುಬಂದಲ್ಲಿ, ಕಟ್ಟಡ ನಿರ್ಮಾಣದ ಸಾಮಗ್ರಿಗಳನ್ನು ವಶಪಡಿಸಿಕೊಂಡು ಕೆ.ಎಂ.ಸಿ ಕಾಯ್ದೆಯಡಿ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಪಾಲಿಕೆ ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಆನ್‌ಲೈನ್ ತಂತ್ರಾಂಶದಲ್ಲಿ ಕಟ್ಟಡ ಪರವಾನಿಗೆ ಅರ್ಜಿಗಳನ್ನು ಸ್ವೀಕರಿಸಿ ನಿಯಮಾನುಸಾರವಾಗಿ ಕಟ್ಟಡ ಪರವಾನಿಗೆ ನೀಡಲು ಕ್ರಮವಹಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಪಾಲಿಕೆಯ ನಗರ ಯೋಜನಾ ಶಾಖೆ ಸಂಪರ್ಕಿಸಲು ತಿಳಿಸಿದ್ದಾರೆ.

## ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ದಸರಾ ಹಬ್ಬದ ವಿಶೇಷ ಪೂಜೆ

ದಾವಣಗೆರೆ, ಅ.8- ನಗರದ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ದಸರಾ ಹಬ್ಬದ ಪ್ರಯುಕ್ತ ಶ್ರೀ ಮಾತಾ ಪಂಚವಟಿ ನಾಗಕಾಳಿಕಾ ದೇವಿಯ 31 ನೇ ವರ್ಷದ ಶರನ್ನವರಾತ್ರಿಯ ಮಹಾ ಪೂಜಾ ಕಾರ್ಯಕ್ರಮ ಹಾಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

ಇದೇ ದಿನಾಂಕ 11 ರಂದು ಆಯುಧ ಪೂಜೆ, ಮಧ್ಯಾಹ್ನ 12.15ಕ್ಕೆ ವಿಶೇಷ ಪೂಜೆ ಹಾಗೂ ಪ್ರಸಾದ ವಿನಿಯೋಗವಿರುತ್ತದೆ. ಇದೇ ದಿನಾಂಕ 12 ರಂದು ವಿಜಯದಶಮಿಯಂದು ಸುಮಂಗಲಿಯರಿಗೆ ಉಡಿ ತುಂಬುವ ಸೇವೆಯನ್ನು ಮಾಡಲಾಗುವುದು.

## ಶಾಮನೂರಿನಲ್ಲಿ ಇಂದು ಜಾನಪದ ಗಾಯನ

ಶಾಮನೂರಿನ ಜನತಾ ಕಾಲೋನಿಯಲ್ಲಿನ ಶ್ರೀ ಮಾಲಸಾಂಬ ಗಂಗಮಾಳಮ್ಮ ದೇವಸ್ಥಾನ ಸಮಿತಿ ವತಿಯಿಂದ ಶರನ್ನವರಾತ್ರಿ ಅಂಗವಾಗಿ ಇಂದು ರಾತ್ರಿ 8.30 ಕ್ಕೆ ಜಾನಪದ ಗೀತೆಗಳ ಗಾಯನ ಕಾರ್ಯಕ್ರಮ ಜರುಗಲಿದೆ. ಸಂಜೆ ಶ್ರೀ ದೇವಿಯ ಪುರಾಣ ಪ್ರವಚನ ನಡೆಯಲಿದೆ.

## ನಗರದಲ್ಲಿ ಇಂದು ಸರಸ್ವತಿ ಅಲಂಕಾರ

ದಾವಲ್‌ಪೇಟೆಯ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ತೊಗಟವೀರ ಸಮಾಜದ ವತಿಯಿಂದ ಶರನ್ನವರಾತ್ರಿ ಅಂಗವಾಗಿ ಇಂದು ಸರಸ್ವತಿ ಅಲಂಕಾರ ಮಾಡಲಾಗುವುದು.

## ನಗರದಲ್ಲಿ ಕಲರ್ಸ್ ದಾಂಡಿಯಾ ಉತ್ಸವ -2024



ದಾವಣಗೆರೆ, ಅ.8- ನವರಾತ್ರಿ ಸಂಭ್ರಮಾಚರಣೆ ಅಂಗವಾಗಿ ನಗರದ ಬಾಪೂಜಿ ಸಮುದಾಯ ಭವನದಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ದಾಂಡಿಯಾ ಉತ್ಸವ -2024 ಕಾರ್ಯಕ್ರಮವನ್ನು ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಉದ್ಘಾಟಿಸಿದರು. ಕೈಗಾರಿಕೋದ್ಯಮಿ ಡಾ. ಅಥಣಿ ಎಸ್. ವೀರಣ್ಣ, ಉದ್ಯಮಿ ನಲ್ಲೂರು ಎಸ್. ರಾಘವೇಂದ್ರ, ಗಿರೀಶ್, ಸೇರಿದಂತೆ ಅನೇಕ ಗಣ್ಯರು, ಮಹಿಳಾ ಸದಸ್ಯರು, ಮಕ್ಕಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಯಲ್ಲಮ್ಮನಗರ : ಶ್ರೀ ಬನ್ನಿಮಹಾಂಕಾಳಿ ದೇವಸ್ಥಾನದಲ್ಲಿ 11 ರಂದು ವಿಶೇಷ ಪೂಜೆ



ದಾವಣಗೆರೆ, ಅ. 8 - ಇಲ್ಲಿನ ಯಲ್ಲಮ್ಮನಗರ 4ನೇ ಮೇನ್, 7ನೇ ಕ್ರಾಸ್‌ನಲ್ಲಿರುವ ಶ್ರೀ ಬನ್ನಿ ಮಹಾಂಕಾಳಿ ದೇವಸ್ಥಾನದಲ್ಲಿ ಇದೇ ದಿನಾಂಕ 11ರ ಶುಕ್ರವಾರ ದೇವಿಯ ಅಭಿಷೇಕ, ಕುಂಭಾಭಿಷೇಕ, ಸಂಜೆ ಎಲೆಪೂಜೆ, ದೀಪ ಹಾಕುವ ಕಾರ್ಯಕ್ರಮ ನಡೆಯಲಿದೆ.

ದಿನಾಂಕ 12ರ ಶನಿವಾರ ಬನ್ನಿ ಮುಡಿಯುವ ಕಾರ್ಯಕ್ರಮವಿದ್ದು, ರಾತ್ರಿ 10 ಗಂಟೆಗೆ ಭಜನೆ, ದಿನಾಂಕ 13ರ ಭಾನುವಾರ ಅನ್ನ ಸಂತರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

## ಸಂತೇಬೆನ್ನೂರಿನ ಡಾ. ಎಂ. ಬಸವಂತಪ್ಪ ನಿಧನ



ಚನ್ನಗಿರಿ ತಾಲ್ಲೂಕು, ಸಂತೇಬೆನ್ನೂರು ವಾಸಿ
ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ

**ಡಾ. ಎಂ. ಬಸವಂತಪ್ಪನವರು**

ದಿನಾಂಕ 8.10.2024ರ ಮಂಗಳವಾರ ಸಂಜೆ 7.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 73 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 9.10.2024ರ ಬುಧವಾರ ಮಧ್ಯಾಹ್ನ 3 ಗಂಟೆಗೆ ಹೊನ್ನೆಮರದಹಳ್ಳಿ ತೋಟದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬದವರು**


**ಬೇಕಾಗಿದ್ದಾರೆ**

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ

**ಶಾಂತಲಾ** ದಿ ವೆಡ್ಡಿಂಗ್ ಮಾಲ್....
ಚಾಮರಾಜ ಪೇಟೆ, ದಾವಣಗೆರೆ.
9686195327


## ದ್ವಿತೀಯ ವರ್ಷದ ಪುಣ್ಯಸ್ಮರಣೆ



ಜನನ 01.01.1940 | ನಿಧನ 09.10.2022

**ಲಿಂ. ಕೊಂಡಜ್ಜಿ ಪಾರ್ವತಮ್ಮ**

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು...
ನಿಮ್ಮ ಸವಿ ನೆನಪೇ ನಮಗೆ ದಿವ್ಯ ಚೇತನ. ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಸದಾ ಪ್ರಾರ್ಥಿಸುವ ಹಾಗೂ ಸದಾ ನಿಮ್ಮ ಸವಿನೆನಪಿನಲ್ಲಿರುವ...

ಪತಿ : ಕೊಂಡಜ್ಜಿ ಶ್ರೀ ಎಂ. ನಾಗಪ್ಪ ಮಕ್ಕಳು : ♦ ಶ್ರೀಮತಿ ಶಾರದ ♦ ಶ್ರೀ ನಿರಂಜನಮೂರ್ತಿ ♦ ಶ್ರೀ ಚಂದ್ರಕಾಂತ್ ♦ ಶ್ರೀ ಸತೀಶ್ ♦ ಡಾ. ಲೋಹಿತ್ ಮತ್ತು ಕುಟುಂಬದವರು ಹಾಗೂ ಬಂಧು ಮಿತ್ರರು.
ಸರಸ್ವತಿ ನಗರ, ದಾವಣಗೆರೆ, ಮೊ : 94496 28863






KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas